ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 9 | ಮಾರ್ಚ್ 1, 1981 | ಬೆಲೆ : 50 ಪೈಸೆ

ರಾಯರ ಆಕ್ರೋಶ

ಇತ್ತೀಚೆಗೆ ಚಾವುಂಡರಾಯನಿಗೆ ಸಮನಾದ ವ್ಯಕ್ತಿ ಎಂಬ ಹೊಗಳಿಕೆಯನ್ನು ಗಳಿಸಿಕೊಂಡ ಸ್ಫೂರ್ತಿಯಿಂದಲೋ ಎಂಬಂತೆ ರಾಜ್ಯದ ಮುಖ್ಯಮಂತ್ರಿ ಗುಂಡೂರಾಯರು ರಾಜ್ಯದ ಎರಡು ಪ್ರಮುಖ ಪತ್ರಿಕೆಗಳ ಮೇಲೆ ಯುದ್ಧವನ್ನೇ ಸಾರಿರುವರು. ಇಂಗ್ಲೀಷ್ ದಿನಪತ್ರಿಕೆ ಡೆಕ್ಕನ್ ಹೆರಾಲ್ಡ್ ಮತ್ತು ಕನ್ನಡ ದಿನಪತ್ರಿಕೆ ಪ್ರಜಾವಾಣಿ ತಮ್ಮ ಬಗ್ಗೆ ಏನೇನೋ ಸುಳ್ಳು ಬರೆಯುತ್ತಿವೆ ಹಾಗೂ ತಮ್ಮ ಸರ್ಕಾರದ ಸಾಧನೆಗಳನ್ನು ಪ್ರಚುರಗೊಳಿಸುವುದಿಲ್ಲ ಎಂಬುದಾಗಿ ಆರೋಪಿಸಿ, ಈ ಪತ್ರಿಕೆಗಳಿಗೆ ಜನರು ಬಹಿಷ್ಕಾರ ಹಾಕುವಂತೆ ಮಾಡಬೇಕಾದೀತೆಂದು ಗುಡುಗಿರುವರು ಗುಂಡೂರಾಯರು. ಜಾತಿಯ ಹಿತಾಸಕ್ತಿಯನ್ನೂ ಆರೋಪಿಸಿರುವ ಗುಂಡೂರಾಯರು, ಸಿಟ್ಟಿನಿಂದ ಏನೇನೋ ಮಾತುಗಳನ್ನು ಆಡಿರುವರು.

ರಾಜ್ಯದ ಮುಖ್ಯಮಂತ್ರಿಯೋರ್ವರು ಈ ರೀತಿ ವರ್ತಿಸುವುದು ಮತ್ತು ಈ ಮಟ್ಟಕ್ಕಿಳಿಯುವುದು ಅತ್ಯಂತ ಹೇಯವಾದ ಕ್ರಮ. ವಾಸ್ತವ ಚಿತ್ರವನ್ನು ಕೊಡುವ ಮತ್ತು ಎಲ್ಲಾ ವಿಚಾರಧಾರೆಗಳನ್ನೂ ಜನತೆಯ ಮುಂದಿಡಲು ಪ್ರೋತ್ಸಾಹವೀಯುವುದಕ್ಕೆ ಬದಲು, ಆಳುವ ಪಕ್ಷದ ಮುಖಂಡರು ಅನುಸರಿಸುವ ಧೋರಣೆ ತೀರಾ ಅಪಾಯಕಾರಿಯಾದುದು. ಈ ಹಿಂದೆ

ಸಂಪಾದಕೀಯ

ರಾಜ್ಯದ ಪ್ರಮುಖ ಪತ್ರಿಕೆಗಳ ಕಛೇರಿಯನ್ನು ಯುವ ಕಾಂಗ್ರೆಸ್ ಕಾರ್ಯಕರ್ತರು ಮುತ್ತಿಗೆ ಹಾಕಿದ್ದು, ಖ್ಯಾತ ಪತ್ರಕರ್ತ ಲಂಕೇಶರ ಮೇಲೆ ಹಲ್ಲೆ ನಡೆದಿರುವುದು, ಮತ್ತೆ ಇದೀಗ ರಾಯರು ಗುಡುಗಿರುವುದನ್ನು ನೋಡಿದರೆ ಮುಂದೆ ಇರುವ ಅಪಾಯವು ಸ್ಪಷ್ಟ. ಸಂಘಟಿತ ಧಾಳಿಯನ್ನೇ ಪತ್ರಿಕೆಗಳ ಮೇಲೆ ನಡೆಸಿದರೂ ಆಶ್ಚರ್ಯವಿಲ್ಲ.

ತನ್ನ ಸ್ವಂತ ಅಭಿಪ್ರಾಯಗಳನ್ನು ಇಟ್ಟುಕೊಳ್ಳುವ ಹಕ್ಕು ಗುಂಡೂರಾಯರಿಗಿದೆ. ಆದರೆ ರಾಜ್ಯದ ಮುಖ್ಯಮಂತ್ರಿಯಾಗಿ ಅವರು ಹೇಳಿರುವ ಮಾತು ಮತ್ತು ತೋರಿದ ವರ್ತನೆ ತೀರಾ ತಪ್ಪು ಮತ್ತು ಖಂಡನೀಯ. ರಾಜ್ಯದ ಎಲ್ಲಾ ಪ್ರಜಾಪ್ರಭುತ್ವವಾದಿಗಳಿಗೆ ಮತ್ತು ಚಿಂತಕರಿಗೆ ಆಘಾತವನ್ನುಂಟುಮಾಡಿದೆ ಈ ಘಟನೆ. ಇದು ಕೇವಲ ಎರಡು ಪತ್ರಿಕೆಗಳ ಮೇಲೆ ನಡೆದಿರುವ ಧಾಳಿ ಮಾತ್ರವೇ ಅಲ್ಲ. ಎಲ್ಲಾ ಪತ್ರಿಕೆಗಳು ಮತ್ತು ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆಯಲಿರುವ ಧಾಳಿಗೆ ಮುನ್ಸೂಚನೆಯಾಗಿದೆ. ಗುಂಡೂರಾಯರು ಪತ್ರಿಕೆಗಳ ಮೇಲೆ ನಡೆಸುತ್ತಿರುವ ಆಕ್ರಮಣವನ್ನು ಎಲ್ಲಾ ಪ್ರಜಾಪ್ರಭುತ್ವ ಮತ್ತು ಪ್ರಗತಿಶೀಲ ಶಕ್ತಿಗಳು ವಿರೋಧಿಸಬೇಕು. ಸರ್ವಾಧಿಕಾರ ಮತ್ತು ಫ್ಯಾಸಿಸ್ಟ್ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕು.

ಮಾ. 31ರಂದು ಜನತಂತ್ರರಂಗದ ನೇತೃತ್ವದಲ್ಲಿ

ಜಿಲ್ಲಾ ಕೇಂದ್ರಗಳಲ್ಲಿ ಸತ್ಯಾಗ್ರಹ

ಸಹಸ್ರ ಸಹಸ್ರ ಸಂಖ್ಯೆಯಲ್ಲಿ ರೈತರನ್ನು ಮತ್ತು ಹಳ್ಳಿಯ ಬಡವರನ್ನು ಸೇರಿಸಿ, ಕಾರ್ಮಿಕ ವರ್ಗ, ವಿದ್ಯಾರ್ಥಿ ಯುವಜನತೆ ಮತ್ತು ಬುದ್ಧಿಜೀವಿಗಳು ಹಾಗೂ ಇತರೆ ಜನಸಾಮಾನ್ಯರ ಬೆಂಬಲದೊಂದಿಗೆ ಮಾರ್ಚ್ 23 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಜಿಲ್ಲಾಧಿಕಾರಿ ಕಛೇರಿಗಳೆದುರು ಧರಣಿ ಸತ್ಯಾಗ್ರಹ ನಡೆಸಲು ರೈತ-ಕಾರ್ಮಿಕ ಹೋರಾಟ ಸಮಿತಿಯು ಕರೆ ಇತ್ತಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್(ಯು) ಮತ್ತು ಲೋಕದಳ ಪಕ್ಷಗಳು ರೂಪಿಸಿಕೊಂಡಿರುವ ಕರ್ನಾಟಕ ಪ್ರಗತಿಪರ ಜನತಂತ್ರ ರಂಗದ "ರೈತ-ಕಾರ್ಮಿಕ ಹೋರಾಟ ಸಮಿತಿ"ಯು ಫೆಬ್ರವರಿ 20 ರಂದು ಬೆಂಗಳೂರಿನಲ್ಲಿ ಸೇರಿ ಈ ನಿರ್ಣಯವನ್ನು ಕೈಗೊಂಡಿದೆ.

ಫೆಬ್ರವರಿ 5 ರಂದು ಬೆಂಗಳೂರಿನಲ್ಲಿ ಚರಿತ್ರಾರ್ಹವಾದ ಭಾರಿ ಮತಪ್ರದರ್ಶನ ನಡೆದಿದ್ದು, ಅಂದು ರಾಜ್ಯದ ಮುಖ್ಯಮಂತ್ರಿಯವರಿಗೆ ಹನ್ನೆರಡು ಬೇಡಿಕೆಗಳುಳ್ಳ ಮನವಿಯನ್ನು ಅರ್ಪಿಸಲಾಗಿತ್ತು. ರೈತ ಚಳುವಳಿಯ ಸಂದರ್ಭ ಬಂಧಿಸಿದವರೆಲ್ಲರ ಬೇಷರತ್ತು ಬಿಡುಗಡೆ, ಎಲ್ಲಾ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕೆಂಬ ಮೊದಲ ಬೇಡಿಕೆ ಹಾಗೂ ರೈತರ ಬೆಳೆಗೆ ಸರಿಯಾದ ಬೆಲೆ, ರೈತರ ಸಾಲ ರದ್ದತಿ, ಭೂಮಿ ಇಲ್ಲದವರಿಗೆ ಮತ್ತು ದರಖಾಸ್ತುದಾರರಿಗೆ ಭೂಮಿ ಕೊಡುವುದು, ಕೃಷಿ ಕೂಲಿಗಾರರಿಗೆ ಕನಿಷ್ಟ 10 ರೂ. ದಿನಗೂಲಿ, ಜೀವನಾವಶ್ಯಕ ವಸ್ತುಗಳ ವಿತರಣೆಗಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆ-ಇವೇ ಮೊದಲಾದ ಬೇಡಿಕೆಗಳು ಮನವಿಯಲ್ಲಿದ್ದವು. ರಾಜ್ಯ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಲು ಮತ್ತು ರೈತ-ಕಾರ್ಮಿಕ ಹೋರಾಟ ಸಮಿತಿಯೊಡನೆ ಚರ್ಚಿಸಿ ಬೇಡಿಕೆಗಳನ್ನು ಈಡೇರಿಸುವ ಲಕ್ಷಣಗಳೂ ಇಲ್ಲ. ಈ ಪರಿಸ್ಥಿತಿಯಲ್ಲಿ ಹೋರಾಟವನ್ನು ಮುಂದುವರಿಸುವುದು ಮತ್ತು ರಾಜ್ಯದಾದ್ಯಂತ ಚಳುವಳಿಯನ್ನು ಬೆಳೆಸುವುದು ಅನಿವಾರ್ಯ. ಆದುದರಿಂದಲೇ ಚಳುವಳಿಯ ಎರಡನೇ ಹಂತವಾಗಿ ಮಾರ್ಚ್ 23 ರಂದಿನ ಕಾರ್ಯಕ್ರಮವನ್ನು ಯೋಜಿಸಲಾಗಿದೆ. ಸರ್ಕಾರವು ತೆಪ್ಪಗಿದ್ದಲ್ಲಿ, ಮೂರನೇ ಹಂತದಲ್ಲಿ ಹೋರಾಟವನ್ನು ತಾಲ್ಲೂಕು ಮಟ್ಟದಲ್ಲಿ ನಡೆಸಲಾಗುವುದೆಂದೂ, ಲಕ್ಷಗಟ್ಟಲೆ ಮಂದಿ ಪಿಕೆಟಿಂಗ್ ನಡೆಸಿ ಜೈಲು ತುಂಬುವ ಕಾರ್ಯಕ್ರಮವನ್ನು ಹಾಕಬೇಕಾಗುವುದೆಂದೂ ಸಮಿತಿಯು ಎಚ್ಚರಿಸಿದೆ.

(ಕಡೇ ಪುಟ ನೋಡಿ)

ಫೆಬ್ರವರಿ 22, 1981ರಂದು ನವದೆಹಲಿಯಲ್ಲಿ ನಡೆದ ಕೇಂದ್ರ ಕಾರ್ಮಿಕ ಸಂಘಟನೆಗಳ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯ

ಮಾರ್ಚ್ ೧೧. ಅಖಿಲಭಾರತ ಕಾರ್ಮಿಕರ ಮುಷ್ಕರ

ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಹೆಚ್.ಎಂ.ಎಸ್., ಬಿ.ಎಂ.ಎಸ್. ಮತ್ತು ಟಿ.ಯು.ಸಿ.ಸಿ. ಹಾಗೂ ಬ್ಯಾಂಕ್, ಜೀವವಿಮೆ, ರೈಲ್ವೇ, ರಕ್ಷಣಾ, ಕಲ್ಲಿದ್ದಲು, ತೈಲ, ಗೊಬ್ಬರ, ವೃತ್ತಪತ್ರಿಕೆ, ಬಂದರು ಮತ್ತು ಹಡಗುಕಟ್ಟೆ ಮುಂತಾದ ಉದ್ಯಮಗಳಲ್ಲಿ ಕೆಲಸಮಾಡುತ್ತಿರುವ ಕಾರ್ಮಿಕರ ರಾಷ್ಟ್ರೀಯ ಒಕ್ಕೂಟಗಳ ಪ್ರತಿನಿಧಿಗಳು ಸೇರಿ ಕಾರ್ಮಿಕವರ್ಗ ಮತ್ತು ಟ್ರೇಡ್ ಯೂನಿಯನ್ ಚಳುವಳಿಯ ಮೇಲೆ ಕೇಂದ್ರ ಸರ್ಕಾರದ ಉದ್ದೇಶಪೂರ್ವಕ ಆಕ್ರಮಣ ಮತ್ತು ಕಾರ್ಮಿಕವಿರೋಧೀ ಧೋರಣೆಗಳಿಂದಾಗಿ ಇಡೀ ಟ್ರೇಡ್ ಯೂನಿಯನ್ ಚಳುವಳಿಯ ಬೆಳವಣಿಗೆಗಳನ್ನು ವಿಮರ್ಶಿಸಲು ದಿನಾಂಕ 22-2-81ರಂದು ಹೊಸದೆಹಲಿಯಲ್ಲಿ ಮೇಳೈಸಿದ ಸಂಘಸಂಸ್ಥೆಗಳ ಪ್ರತಿನಿಧಿಗಳು ಸಭೆ ಸೇರಿದ್ದರು. ಸಿ.ಐ.ಟಿ.ಯು. ಪರವಾಗಿ ಕರ್ನಾಟಕ ರಾಜ್ಯಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ಸರ್ಕಾರೀ ವಕ್ತಾರರು ಭೂತಲಿಂಗಂ ಕರಡು ವರದಿಯನ್ನು ಕಸದ ಬುಟ್ಟಿಗೆ ಎಸೆದ ಬಗ್ಗೆ ಮಾತನಾಡಿದ್ದರೂ ಸಹ ಇಡೀ ಕಾರ್ಮಿಕವರ್ಗ ಒಕ್ಕೊರಲಿನಿಂದ ತಿರಸ್ಕರಿಸಿದ್ದ ಅದೇ ಕುಪ್ರಸಿದ್ಧ ವರದಿಯನ್ನು ಜಾರಿಗೊಳಿಸಲು ಸರ್ಕಾರ ಈಗಾಗಲೇ ಅನೇಕ ಕ್ರಮಗಳನ್ನು ಕೈಗೊಂಡಿದೆ. ಬೆಂಗಳೂರಿನಲ್ಲಿರುವ ಉದ್ಯಮಗಳ ಕಾರ್ಮಿಕ ಸಂಘಗಳೊಂದಿಗೆ ಮಾಡಿಕೊಂಡಿದ್ದ ಒಪ್ಪಂದಕ್ಕೆ ಸರ್ಕಾರ ಬದ್ಧವಾಗಿರುವುದರ ಬದಲು ಒಪ್ಪಂದಕ್ಕೆ ಅಪಚಾರವೆಸಗಿದ ಕಾರಣದಿಂದಾಗಿ ಬದಲೀ ಮಾರ್ಗವಿಲ್ಲದೆ ಕಾರ್ಮಿಕರು ಡಿಸೆಂಬರ್ 26ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ಪ್ರಾರಂಭಿಸಿದರು. "ಮುಷ್ಕರ ಇನ್ನೂ ಸಹ ಮುಂದುವರಿಯುತ್ತಿದೆ".

ಕಾರ್ಮಿಕಸಂಘಗಳೊಂದಿಗೆ ಇತ್ತೀಚೆಗೆ ನಡೆದ ಮಾತುಕತೆಗಳಲ್ಲಿ ಸರ್ಕಾರ ತೀರಾ ಬಿಗಿ ಮನೋಭಾವವನ್ನು ಅನುಸರಿಸಿತು ಮತ್ತು ಕಾರ್ಮಿಕ ಸಂಘಗಳು ಸೂಚಿಸಿದ ನ್ಯಾಯಯುತವಾದ ಸಲಹೆಗಳನ್ನು ಸರ್ಕಾರ ಅಹಂಕಾರದಿಂದ ತಿರಸ್ಕರಿಸಿತು. ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿರುವ ಎಲ್ಲಾ ಸಾರ್ವಜನಿಕ ಕ್ಷೇತ್ರಗಳ ಒಂದು ಲಕ್ಷದ ಇಪ್ಪತ್ತೈದು ಸಾವಿರ ಮಂದಿ ಕಾರ್ಮಿಕರ ದೀರ್ಘ ಮುಷ್ಕರ ಇಡೀ ಭಾರತದ ಕಾರ್ಮಿಕ ಚಳುವಳಿಗೆ ಒಂದು ಸವಾಲಾಗಿ ಪರಿಣಮಿಸಿತು. ಬೆಂಗಳೂರು ಹಾಗೂ ಇತರ ಕೇಂದ್ರಗಳಲ್ಲಿನ ಮುಷ್ಕರ ನಿರತ ಧೀರ ಕಾರ್ಮಿಕರಿಗೆ ಈ ಸಭೆಯು ತನ್ನ ಶುಭಾಶಯಗಳನ್ನು ಸಲ್ಲಿಸಿ ಕಾರ್ಮಿಕರ ಐಕ್ಯತೆ ಹಾಗೂ ಸೌಹಾರ್ದ ಮನೋಭಾವವನ್ನು ಅಭಿನಂದಿಸಿತು.

ಇತರ ಅನೇಕ ಸಾರ್ವಜನಿಕ ಕ್ಷೇತ್ರದ ಉದ್ಯಮಗಳಾದ ಬಿ.ಹೆಚ್.ಪಿ.ವಿ., ಹೆಚ್.ಸಿ.ಎಲ್., ಹಿಂದೂಸ್ತಾನ್ ಟೆಲಿಪ್ರಿಂಟರ್ ಮುಂತಾದವುಗಳಿಗೆ ಬಿ.ಹೆಚ್.ಇ.ಎಲ್. ಸಮಾನವಾದ ವೇತನ ನೀಡಲು ಒಪ್ಪಿಕೊಂಡಿದ್ದರೂ ಬಿ.ಹೆಚ್.ಇ.ಎಲ್. ಒಪ್ಪಂದಕ್ಕೆ ಸಹಿ ಮಾಡಿ ಈಗಾಗಲೇ ಒಂದು ವರ್ಷ ಕಳೆದಿದ್ದರೂ ಸಹ ಅದನ್ನು ಜಾರಿಗೊಳಿಸುವಲ್ಲಿ ಸರ್ಕಾರ ವಿಫಲವಾಗಿದೆ. ಹಿಂದೂಸ್ತಾನ್ ಕೇಬಲ್ಸ್‌ನ ಕಾರ್ಮಿಕರು ಫೆಬ್ರವರಿ 5ರಿಂದ ಅನಿರ್ದಿಷ್ಟ ಕಾಲಾವಧಿಯ ಮುಷ್ಕರವನ್ನು ಅವರ ಒಪ್ಪಂದದ ಜಾರಿಗಾಗಿ ಒತ್ತಾಯಿಸಿ ನಡೆಸುತ್ತಿದ್ದರೂ ಸಹ ಸರ್ಕಾರ ಇದನ್ನು ನಿರಾಕರಿಸಿತು.

ಎಲ್.ಐ.ಸಿ. ಸುಗ್ರೀವಾಜ್ಞೆಯು ಸುಪ್ರೀಂ ಕೋರ್ಟ್ ತೀರ್ಮಾನವನ್ನು ಬಹಿರಂಗವಾಗಿ ಬುಡಮೇಲುಗೊಳಿಸಿ ದೇಶದ ನ್ಯಾಯಾಂಗ ವ್ಯವಸ್ಥೆಯನ್ನೇ ಅಣಕಿಸಿತು. ಸುಗ್ರೀವಾಜ್ಞೆಯು ವೇತನ ಹಾಗೂ ಸೇವಾನಿಯಮಗಳನ್ನು ಏಕಪಕ್ಷೀಯವಾಗಿ ತೀರ್ಮಾನಿಸುವ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ನೀಡಿತು. ಸಾಮೂಹಿಕ ಚೌಕಾಶಿಯನ್ನು ಹಾಗೂ ಕಾರ್ಮಿಕ ಸಂಘಗಳ ಮೂಲಭೂತ ಹಕ್ಕನ್ನು ಕೊನೆಗೊಳಿಸಿತು. ಈಗಾಗಲೇ ಸರ್ಕಾರ ನೀಡಿರುವ ಸೂಚನಾ ಪತ್ರದಲ್ಲಿ ಡಿ. ಎ. ನಲ್ಲಿ ಕಡಿತ ಮತ್ತು ಕಾರ್ಮಿಕರ ಬೋನಸ್ ಹಕ್ಕನ್ನು ಹಿಂತೆಗೆದುಕೊಂಡಿರುವುದು ಸರ್ಕಾರದ ನಿಲುವನ್ನು ಸೂಚಿಸುತ್ತದೆ. ಸರ್ಕಾರದ ಇಂಥದೇ ಒಂದು ಸೂಚನೆಯಲ್ಲಿ ಜಿ. ಐ. ಸಿ. ನೌಕರರ ಸೇವಾ ನಿಯಮವನ್ನು ಏಕಪಕ್ಷೀಯವಾಗಿ 1-1-1979ರಿಂದ ಬದಲಾಯಿಸಲಾಗಿದೆ.

ರಾಷ್ಟ್ರೀಯ ಭದ್ರತಾ ಕಾಯಿದೆಯನ್ನು ಕಾರ್ಮಿಕ ಹೋರಾಟಗಳಲ್ಲಿ ಪ್ರಯೋ

(ಕಡೇ ಪುಟ ನೋಡಿ)

ಇತ್ತೀಚಿನ ಕೆಲವು ವರ್ಷಗಳಲ್ಲಿ ಜಗತ್ತಿನ ಬೇರೆಬೇರೆ ಭಾಗಗಳಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಯು ತನ್ನ ಹಿಡಿತವನ್ನು ಕಳೆದುಕೊಳ್ಳತೊಡಗಿದೆ. ಮೊಜಾಂಬಿಕ್, ಅಂಗೋಲಾ ರಾಷ್ಟ್ರಗಳ ವಿಮೋಚನೆಯಾದದ್ದು, ಗಲ್ಫ್ ಪ್ರದೇಶಕ್ಕೇನೆಯೇ ಕಾವಲು ಕಾಯುತ್ತಿದ್ದ ಹಂತಕ ಮಹಾಶಯ ಷಹಾನ ಆಳ್ವಿಕೆ ಕೊನೆಗೊಂಡಿದುದು ಅಮೇರಿಕದ ಕಾಲ್ಮೂಳೆ ಮುರಿದು ಹೋದಂತಾಗಿದೆ. ಕ್ರಾಂತಿಯಿಂದ ಸ್ವತಂತ್ರವಾದ ಇರಾನಿನ ಮೇಲೆ ಎಂಟೆಬೆ ಸಾಹಸ ನಡೆಸಲು ಹೋಗಿ ಮರುಭೂಮಿಯಲ್ಲಿ ಎಡವಿಬಿದ್ದು ಹಿಂದೋಡಬೇಕಾದುದು ಅಮೇರಿಕದ ಮಾನ ಮರ್ಯಾದೆ ಮೂರು ಕಾಸಾಗಿ ಹೋಯಿತು. ನಂತರ ಜಿಂಬಾಬ್ವೆ ಸ್ವತಂತ್ರ ರಾಷ್ಟ್ರವಾಗಿ ಉದಯವಾದುದು, ಅರಬ್ ರಾಷ್ಟ್ರಗಳು ನಡೆಸುತ್ತಿರುವಂತಹ ಹೋರಾಟ, ಆಫ್ರಿಕಾ ಅಮೇರಿಕಾ ಖಂಡಗಳಲ್ಲಿ ವಿಮೋಚನಾ ಸಮರಗಳ ಮುನ್ನಡೆ ಇವೆಲ್ಲವೂ ಅಮೇರಿಕದ ಬಾಹು ದೇಶಗಳ ಮೇಲಿನ ನಿಯಂತ್ರಣ ತಪ್ಪಿ ಹೋಗುತ್ತಾ, ಆಂತರಿಕವಾಗಿ ತನ್ನ ಇತಿಹಾಸದಲ್ಲೇ ಎಂದೂ ಕಂಡಿರದ ಪ್ರಮಾಣದಲ್ಲಿ ಹಣ ದುಬ್ಬರ, ನಿರುದ್ಯೋಗ, ಆರ್ಥಿಕ ಹಿಂಜರಿತ, ಬಿಕ್ಕಟ್ಟುಗಳು ಉಂಟಾಗಿವೆ. ಈ ಅವನಗಳೊಂದಿಗೆ ಒಳ್ಳೆಯ ಸಂಬಂಧವನ್ನು ಸಾಧಿಸಿ ನ್ಯಾಟೋ ಮಿಲಿಟರಿ ಕೂಟವನ್ನು ಭದ್ರಗೊಳಿಸಿದ ಕುಖ್ಯಾತ. ವಿಯಟ್ನಾಂ ಯುದ್ಧ ಕಾಲದಲ್ಲಿ ಬಾಂಬ್ ಮಳೆಗರೆದು ಹಾಯ್‌ಫನ್ ಬಂದರನ್ನು ಭಸ್ಮಮಾಡುವ, ಅಮೇರಿಕನ, ಕಾಂಗ್ರೆಸ್ ಮತ್ತು ಜನತೆಗೆ ಗೊತ್ತಿಲ್ಲದಂತೆ, ಕಂಪೂಚಿಯಾದ ಮೇಲೆ ಬಾಂಬ್‌ದಾಳಿ ನಡೆಸಿ, ಅಧಿಕಾರ ದುರುಪಯೋಗಪಡಿಸಿಕೊಂಡೆನೆಂಬ ಆರೋಪಗಳು ಇವನ ಮೇಲಿದೆ. ಚಿಲಿಯಲ್ಲಿ ಅಲೆಂಡೆ ಸರ್ಕಾರವನ್ನು ಉರುಳಿಸಿ ಮಿಲಿಟರಿ ಕೂಪ್ ನಡೆಸುವಲ್ಲಿ ಈತ ಪ್ರಮುಖ ಪಾತ್ರವಹಿಸಿದ್ದಾನೆ. ಇಂತಹ ದಮನಗಳಿಗೆ ತಕ್ಕವನಾದವನೆಂದೇ ರೀಗನ್ ಸ್ಟೇಟ್ ಕಾರ್ಯದರ್ಶಿ ಸ್ಥಾನಕ್ಕೆ ಆರಿಸಿದ್ದಾನೆ.

ಸ್ಟೇಟ್ ಉಪಕಾರ್ಯದರ್ಶಿಯಾಗಿ ವಿಲಿಯಂ ಪಿ. ಕ್ಲಾರ್ಕನನ್ನು ನೇಮಿಸಲಾಗಿದೆ. ಈ ಮನುಷ್ಯ ಕಾಲೇಜ್ ಪಾಸು ಮಾಡಲು ವಿಫಲನಾಗಿ ವಕೀಲ ಪದವಿ ಇಲ್ಲದೆ ಬಾರ್ ಪರೀಕ್ಷೆಯಲ್ಲಿ ಕೂತು ಎರಡನೇ ಸಲ ಪಾಸುಮಾಡಿಕೊಂಡವನು. ರೀಗನ್ ಕ್ಯಾಲಿಫೋರ್ನಿಯಾದ ಗವರ್ನರ್ ಆಗಿದ್ದಾಗ ಇವನನ್ನು ಕ್ಯಾಲಿಫೋರ್ನಿಯಾದ ಸುಪ್ರೀಂ ಕೋರ್ಟಿನ ನ್ಯಾಯಾಧೀಶನನ್ನಾಗಿ ನೇಮಿಸಿ ಮೇಲೆತ್ತಿದ. ತನ್ನ ನಂಬಿಗಸ್ತ ಸೇವಕನಾಗಿರುವುದರಿಂದ ರೀಗನ್ ಇವನನ್ನು ಉಪಕಾರ್ಯದರ್ಶಿ ಸ್ಥಾನಕ್ಕೆ ಆರಿಸಿದ್ದಾನೆ.

ಒಳಸಂಚುಗಳನ್ನು ನಡೆಸಲು ಅಮೇರಿಕಕ್ಕೆ ಹಕ್ಕಿದೆ" ಎಂದು ಸಾರ್ವಜನಿಕವಾಗಿ ಸಾರುತ್ತಾನೆ". ಅಂತಹ ಒಳಸಂಚುಗಳನ್ನು ತಡೆಯುವುದು ವಿಶ್ವದ ಅನೇಕ ಭಾಗಗಳಲ್ಲಿ ಅಮೇರಿಕದ ಹಿತಾಸಕ್ತಿಗೆ ಅಪಾಯವಿದೆ" ಎಂದೇ ಸಮರ್ಥಿಸಿಕೊಳ್ಳುತ್ತಾನೆ.

ಹೀಗೆ ರೀಗನ್ ಆವರಿಸಿದಂತಹ ಪ್ರತಿಯೊಬ್ಬವ್ಯಕ್ತಿ, ಅಧಿಕಾರಿ, ಮಂತ್ರಿ ಮಂಡಳದ ಸದಸ್ಯನಿಗೆ ಕುಪ್ರಸಿದ್ಧ ಇತಿಹಾಸವಿದೆ.

ಅಭಿವೃದ್ಧಿ ಸಹಾಯದಲ್ಲಿ ಕಡಿತ, ಮಿಲಿಟರಿ ಸಹಾಯದಲ್ಲಿ ಏರಿಕೆ

ವಿದೇಶಿ ಸಹಾಯಕ್ಕೆಂದು ಕಾರ್ಟರ್ ಆಡಳಿತವು ತೆಗೆದಿಟ್ಟ 8 ಬಿಲಿಯನ್ ಡಾಲರ್‌ಗಳಲ್ಲಿ $\frac{1}{4}$ ಭಾಗವನ್ನು ರೀಗನ್ ಆಡಳಿತವು ಕಡಿತಗೊಳಿಸಿತು; ಹಾಗೂ ಮಿಲಿಟರಿ ಸಹಾಯವನ್ನು ವಿಪರೀತವಾಗಿ ಏರಿಸಿತು. ಇದರ ಧ್ಯೇಯವೇನೆಂದರೆ "ಅಮೇರಿಕದ ವಿದೇಶಿ ನೀತಿ ಹಿತಾಸಕ್ತಿಯನ್ನು ಮಿಲಿಟರಿ ಉದ್ದೇಶಗಳಿಗೆ ತಕ್ಕಹಾಗೆ ಇರುವಂತೆ ನೋಡಿಕೊಂಡು, ತಮ್ಮ ಅಚ್ಚುಮೆಚ್ಚಿನ ರಾಷ್ಟ್ರಗಳಿಗೆ ನೀಡುವುದು", "ಬಹುಮುಖ ಸಹಾಯಕ್ಕಿಂತ ದ್ವಿಮುಖ

ಮಾರ್ತಿ ರಂಗದ ಚಳುವಳಿಯನ್ನು ಹತ್ತಿಕ್ಕಲು ಎಲ್‌ಸಾಲ್ವೆಡಾರ್‌ನ ಸರ್ವಾಧಿಕಾರಿ ಆಡಳಿತಕ್ಕೆ 5 ಮಿಲಿಯನ್ ಡಾಲರ್‌ಗಳ ಯುದ್ಧಸಾಮಾಗ್ರಿಗಳನ್ನು, ಹೆಲಿಕ್ಯಾಪ್ಟರ್‌ಗಳನ್ನು, ಮಿಲಿಟರಿ ತಜ್ಞರನ್ನೂ, ಸಲಹೆಗಾರರನ್ನೂ ಕಳುಹಿಸಿಕೊಟ್ಟಿದೆ. ಅಮೇರಿಕದ ಆಜ್ಞೆಯ ಮೇರೆಗೆ ಹೊಂಡೂರಸ್ ವಾಯುದಳಗಳು ಬಾಂಬ್‌ದಾಳಿಯನ್ನೇ ಪ್ರಾರಂಭಿಸಿವೆ. ಗ್ವಾಟೇಮಾಲಾದ ಮೋಟಾರ್ ಮಿಲಿಟರಿದಳಗಳು ಎಲ್‌ಸಾಲ್ವೆಡರನ್ನು ಪ್ರವೇಶಿಸಿವೆ. ನಿಕಾರಗುವಕ್ಕೆ ಕಾರ್ಟರ್ ಆಡಳಿತವು ನೀಡಿದ್ದ 75 ಮಿಲಿಯನ್ ಡಾಲರ್‌ಗಳ ಆರ್ಥಿಕನಿಧಿಯನ್ನು ರದ್ದುಗೊಳಿಸಿ ನಿಕಾರಗುವದ ಅರ್ಥವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಲು ಪ್ರಯತ್ನಿಸಲಾಗುತ್ತಿದೆ.

ಬಹಳ ದಿನಗಳಿಂದ ಬಗೆಹರಿಯದೆ ಇದ್ದ ಒತ್ತೆಯಾಳುಗಳ ಸಮಸ್ಯೆಯನ್ನು ಕಾರ್ಟರ್ ಅಧ್ಯಕ್ಷ ಸ್ಥಾನ ಬಿಡುವದಿನ ಇರಾನ್‌ನೊಂದಿಗೆ ಒಪ್ಪಂದ ಮಾಡಿಕೊಂಡು ಬಗೆಹರಿಸಲಾಗಿತ್ತು. ಅಧ್ಯಕ್ಷಸ್ಥಾನ ಏರಿದ ಮಾರನೆಯ ದಿನವೇ ರೀಗನ್ ಈ ಒಪ್ಪಂದಕ್ಕೆ ಅಮೇರಿಕ ಬದ್ಧವಾಗಿರುವುದಿಲ್ಲ ಎಂದು ಹೇಳಿಕೆ ನೀಡಲಾಗಿದೆ.

ಅದೇ ರೀತಿ ಆಫ್ರಿಕಾದಲ್ಲಿ ಪೊಲಿಸ್ಯಾರಿಯೋ ರಂಗದ ವಿರುದ್ಧ ಯುದ್ಧ

ನಿಧಿಗಳನ್ನು ಬರಮಾಡಿಕೊಳ್ಳಲಾಗಿತ್ತು. ಈಗ ನೆದರ್‌ಲ್ಯಾಂಡ್ ಮೂಲಕ ಎರಡು ಸಬ್‌ಮೆರಿನ್‌ಗಳನ್ನು ತೈವಾನಿಗೆ ಕಳುಹಿಸಲಾಗಿದೆ.

ಭಾರತದ ಉಪಖಂಡದಲ್ಲಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ದೊಡ್ಡ ಪ್ರಮಾಣದಲ್ಲಿ ಒದಗಿಸಿ ಅಫ್‌ಘಾನಿಸ್ತಾನದಲ್ಲಿ ಪತಿಗಾಮಿ ಶಕ್ತಿಗಳನ್ನು ಬೆಂಬಲಿಸುವುದಕ್ಕೂ, ಆ ಮೂಲಕ ಪರ್ಶಿಯನ್ ಗಲ್ಫ ಪ್ರದೇಶದಲ್ಲಿ ತಮ್ಮ ಕುಂದುರಿಹೋದ ಬಲವನ್ನು ಪುನರ್ ಸ್ಥಾಪಿಸುವುದಕ್ಕೂ ಪ್ರಯತ್ನಿಸಲಾಗುತ್ತಿದೆ. ಹಿಂದೂ ಮಹಾಸಾಗರದಲ್ಲಿ ಒಂದು ಲಕ್ಷ ಸೈನಿಕರನ್ನು ನಿಲ್ಲಿಸುವಷ್ಟು ಹಡಗುಗಳನ್ನೂ ಸಾಧನಗಳನ್ನೂ ನಿಲ್ಲಿಸುವ ಯೋಜನೆ ಹಾಕಲಾಗಿದೆ ಎಂದು ಪಶ್ಚಿಮ ಯೂರೋಪ್ ವೃತ್ತಗಳಿಂದ ತಿಳಿದುಬಂದಿದೆ.

ನ್ಯೂಟ್ರಾನ್ ಬಾಂಬ್

ಇವೆಲ್ಲವುಗಳಿಗಿಂತಲೂ ಅತ್ಯಂತ ಭಯಾನಕವಾದ ಸಂಗತಿಯೆಂದರೆ ರೇಗನ್ ಆಡಳಿತವು ಅತ್ಯಂತ ವಿನಾಶಕಾರಿಯಾದ ನ್ಯೂಟ್ರಾನ್ ಬಾಂಬ್‌ಗಳನ್ನು ತಯಾರಿಸಿ ನ್ಯಾಟೋ ರಾಷ್ಟ್ರಗಳಿಗೂ ನೀಡಲು ತೀರ್ಮಾನ ಮಾಡಿರುವುದು. ಈ ಸುದ್ದಿ ಹಿಂದುಳಿದದೇಶಗಳಿಗೆ ಆತಂಕಕಾರಿಯಾಗಿರುವುದಷ್ಟೇ ಯಲ್ಲ

ರೀಗನ್ ಆಡಳಿತ ರಾಕ್ಷಸೀ ದಮನದ ಸಿದ್ಧತೆಗಳು

ಶಿಯ ಹಿನ್ನೆಲೆಯಲ್ಲಿ ಅಮೇರಿಕಾದ ಅಧ್ಯಕ್ಷ ಚುನಾವಣೆ ನಡೆಯಿತು.

ನಿಕ್ಸನ್, ಫೋರ್ಡ್, ಕಾರ್ಟರ್ ಈ ಯಾರೇ ಕಾಲವಲ್ಲಾಗಲೀ ಅಮೇರಿಕದ ವಿದೇಶಿಸುಲಿಗೆ, ಯುದ್ಧಕೋರ ನೀತಿ, ವಿಮೋಚನಾ ಸಮರಗಳ ಮರ್ದನ, ಮಿಲಿಟರಿ ಕೂಪ್‌ಗಳು, ಯಾವುದೂ ಕೊಂಚವೂ ಕಡಿಮೆಯಾದುದಿಲ್ಲ. ಆದರೆ ಕಾರ್ಟರ್ ಆಡಳಿತವು ಮೃದುವಾದ ನೀತಿಯನ್ನು ಅನುಸರಿಸಿತೆಂದು ಟೀಕಿಸಿ; ಮತ್ತಷ್ಟು ಉಗ್ರವಾದ ಆಕ್ರಮಣಶಾಹಿ ಧೋರಣೆಯ ಘೋಷಣೆಗಳ ಮೇಲೆ ರೀಗನ್ ಆರಿಸಿಬಂದುದಾಗಿದೆ. ಈ ನೀತಿಗಳಿಗನುಸಾರವಾಗಿಯೇ ತನ್ನ ಮಂತ್ರಿ ಮಂಡಳದ ಸದಸ್ಯರನ್ನೂ, ಅಧಿಕಾರಿಗಳನ್ನೂ ಆರಿಸಲಾಗಿದೆ.

ಮಂತ್ರಿ ಮಂಡಳದಲ್ಲಿ ಕುಪ್ರಸಿದ್ಧರು

ಅಮೇರಿಕದ ಮಂತ್ರಿಮಂಡಳದಲ್ಲಿ ಅತ್ಯಂತ ಪ್ರಾಮುಖ್ಯವಾದ ಸ್ಥಾನವೆಂದರೆ ಸ್ಟೇಟ್ ಕಾರ್ಯದರ್ಶಿ. ಹಿಂದೆ ಮಿಲಿಟರಿ ಜನರಲ್ ಆಗಿದ್ದ ಅಲೆಗ್ಸಾಂಡರ್ ಹೇಗ್‌ನನ್ನು ಈ ಸ್ಥಾನದಲ್ಲಿ ಕೂರಿಸಲಾಯಿತು. ಅಮೇರಿಕದ ಜಗತ್‌ಪ್ರಸಿದ್ಧ ವಾಟರ್‌ಗೇಟ್ ಪ್ರಕರಣದಲ್ಲಿ ಈತ ಪ್ರಮುಖವಾಗಿ ಒಳಗೊಂಡವನು. ಯುರೋಪಿನ ದೇಶ

ಲೇಬರ್ ಕಾರ್ಯದರ್ಶಿಯಾಗಿ ರೇಮಾಂಡ್ ಡೋನೋವಾನ್‌ನನ್ನು ನೇಮಿಸಲಾಗಿದೆ. ಈತ ನ್ಯೂಜರ್ಸಿಯಲ್ಲಿ ಮಾಫಿಯಾ ಗ್ಯಾಂಗಿಗೆ ಹಣ ಸರಬರಾಜು ಮಾಡುತ್ತಿದ್ದನೆಂದು ಫೆಡರಲ್ ಬ್ಯೂರೋ ಇನ್‌ವೆಸ್ಟಿಗೇಶನ್ನಿನ ಆರೋಪಗಳಿವೆ. ಈತನ ಮೇಲೆ ಈ ತರಹದ ಅನೇಕ ಪುಂಡಾಟಿಕೆಯ ಆರೋಪಗಳಿರುವುದರಿಂದ ಸೆನೆಟ್ ಸಭೆಯಲ್ಲಿ ಅನೇಕ ಡೆಮೋಕ್ರಾಟ್ ಪಕ್ಷದ ಸದಸ್ಯರು ಈತನ ನೇಮಕವನ್ನು ವಿರೋಧಿಸಿ ಮತ ಚಲಾಯಿಸಿದ್ದರು.

ವಿಲಿಯಂ ಕ್ಯಾಸೆ ಎನ್ನುವನನ್ನು ಸಿ.ಐ.ಎ. ನಿರ್ದೇಶಕನನ್ನಾಗಿ ನೇಮಿಸಲಾಗಿದೆ. ಈತನ ಸ್ವಭಾವ ಹಾಗೂ ಸಿ.ಐ.ಎ. ಕೆಲಸಗಳು ಏನೆಂಬುದನ್ನು ಸೆನೆಟಿನ ಮುಂದೆ ಈತ ಮಾಡಿದ ಭಾಷಣದಿಂದ ತಿಳಿಯುತ್ತದೆ. ಕನಿಷ್ಟ ಪತ್ರಕರ್ತರನ್ನು, ಶಿಕ್ಷಣತಜ್ಞರನ್ನು, ಹಾಗೂ ಗುಮಾಸ್ತರನ್ನು ಸಿ.ಐ.ಎ. ಸಂಸ್ಥೆ ಉಪಯೋಗಿಸಬಾರದೆನ್ನುವ ಒಂದು ನಿರ್ದೇಶನವಿತ್ತು. ಆದರೆ ವಿಲಿಯಂ ಕ್ಯಾಸೆ "ಈ ದೇಶದ ಸೇವೆ ಸಲ್ಲಿಸಲು ಯಾವ ಅಮೇರಿಕನಿಗೂ ಅವಕಾಶಗಳು ಇಲ್ಲವಾಗಬಾರದು" ಎಂದು ಅಂತಹ ನಿರ್ದೇಶನವನ್ನು ಪರಿಷ್ಕರಿಸುವುದಾಗಿ ಹೇಳಿದ್ದಾನೆ. "ಹೊರ ದೇಶಗಳ ಆಂತರಿಕ ವ್ಯವಹಾರದಲ್ಲಿ ಪ್ರಭಾವಬೀರುವ, ಗುಪ್ತ

ಸಹಾಯಕ್ಕೆ ಹೆಚ್ಚು ಆಡಳಿತೆಕೊಡುವುದು; ಅಭಿವೃದ್ಧಿ ಸಹಾಯಕ್ಕಿಂತ ಮಿಲಿಟರಿ ಸಹಾಯ (ಭದ್ರತಾ

ಯಡೂರ ಮಹಾಬಲ

ಸಹಾಯ)ಕ್ಕೆ ಹೆಚ್ಚಿನ ಆದ್ಯತೆ ಕೊಡುವುದಾಗಿದೆ" ಎಂದು ಸಾರಲಾಗಿದೆ. ಹಿಂದೆ ಇತರೆ ರಾಷ್ಟ್ರಗಳಿಗೆ. ಸಾಲ, ಸಹಾಯನೀಡಿ ಆ ರಾಷ್ಟ್ರಗಳ ಅರ್ಥವ್ಯವಸ್ಥೆಯನ್ನು ನಿಯಂತ್ರಿಸಿ ತಮ್ಮ ಹಿತ ಸಾಧಿಸಿಕೊಳ್ಳುತ್ತಿದರೆ. ಇಂದು ಆ ಮಾರ್ಗದಲ್ಲಿ ಪೂರ್ಣ ಯಶಸ್ಸು ದೊರೆಯುತ್ತಿಲ್ಲ. ಹೀಗಾಗಿ, ದೇಶದೇಶಗಳನ್ನೇ ಮಿಲಿಟರಿ ಬಲದ ಮೂಲಕ ನಿಯಂತ್ರಿಸುವ ಧೋರಣೆಯನ್ನು ಅಳವಡಿಸಲಾಗುತ್ತಿದೆ.

ವಿಮೋಚನಾ ಸಮರದ ಮೇಲೆ ದಾಳಿ

ರೀಗನ್ ಅಧ್ಯಕ್ಷ ಸ್ಥಾನ ವಹಿಸಿಕೊಂಡ ಒಂದೆರಡು ದಿನಗಳಲ್ಲಿಯೇ ಕೇಂದ್ರ ಅಮೇರಿಕಾ ಖಂಡದಲ್ಲಿ ನಡೆಯುತ್ತಿರುವ ವಿಮೋಚನಾ ಸಮರಗಳ ಮೇಲೆ ದಾಳಿ ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಎಲ್‌ಸಾಲ್ವೆಡಾರ್‌ನಲ್ಲಿದ್ದ ಅಮೇರಿಕದ ರಾಯಭಾರಿಯನ್ನು ಡಿಸ್‌ಮಿಸ್ ಮಾಡಲಾಯಿತು. ಫರಬುಂದೋ

ಹೂಡಿರುವ ಮೊರಾಕೋ ದೇಶದ ರಸನ್ ನಿರಂಕುಶಾಡಳಿತಕ್ಕೆ 232 ಮಿಲಿಯನ್ ಡಾಲರ್‌ಗಳ ಯುದ್ಧ ವಿಮಾನಗಳನ್ನೂ, 108, ಎಂ-60 ಟ್ಯಾಂಕ್‌ಗಳನ್ನೂ ನೀಡಲು ಕಾಂಗ್ರೆಸ್ಸಿನ ಮುಂದೆ ಇಡಲಾಗಿದೆ.

ಕಾರ್ಟರ್ ಆಡಳಿತವು ದಕ್ಷಿಣ ಕೋರಿಯಾದಿಂದ ಅಮೇರಿಕದ ಸೈನ್ಯದ ಕೆಲವು ಭಾಗವನ್ನು ಹಿಂತೆಗೆದುಕೊಳ್ಳುವ ಭರವಸೆಯನ್ನಾದರೂ ನೀಡಿತ್ತು. ಈಗ ರೀಗನ್ ದಕ್ಷಿಣ ಕೋರಿಯಾದಲ್ಲಿರುವ 39,000 ಅಮೇರಿಕನ್ ಸೈನಿಕರನ್ನು ಹಿಂತೆಗೆದುಕೊಳ್ಳುವುದಿಲ್ಲವೆಂದು, ಅಲ್ಲಿಯ ಸರ್ವಾಧಿಕಾರಿ ಆಡಳಿತಕ್ಕೆ ಭರವಸೆ ನೀಡಿ ಮತ್ತೆ ಹೆಚ್ಚಿನ ಮಿಲಿಟರಿ ಸಹಾಯವನ್ನು ಒದಗಿಸುವ ಭರವಸೆ ನೀಡಲಾಗಿದೆ.

ಮೂರು ದಶಕಗಳಿಂದ ಬಗೆಹರಿಯದೆ ಉಳಿದಿದ್ದ ತೈವಾನ್ ಪ್ರಶ್ನೆ ಸಡಿಲಗೊಳ್ಳುತ್ತಿದ್ದು ಕಾರ್ಟರ್ ಕಾಲದಲ್ಲಿ ಜನತಾ ಚೀನಾಕ್ಕೆ ಮನ್ನಣೆ ನೀಡಲಾಗಿತ್ತು. ಹಾಗೂ ತೈವಾನನ್ನು ಬಿಟ್ಟುಬಿಡುವ ಭರವಸೆ ನೀಡಲಾಗಿತ್ತು. ಆದರೆ ರೀಗನ್ ತನ್ನ ಚುನಾವಣಾ ಕಾಲದಲ್ಲೇ ತೈವಾನ್ ಬಗೆಗಿನ ಈ ನೀತಿಯನ್ನು ವಿರೋಧಿಸಿದ್ದ ರೀಗನ್ ಆಡಳಿತದ ಪ್ರಾರಂಭೋತ್ಸವಕ್ಕೇನೆಯೇ ಐದು ಜನ ತೈವಾನ್ ಪ್ರತಿ

ಪಶ್ಚಿಮ ಯೂರೋಪಿನ ಬಂಡವಾಳಶಾಹಿ ದೇಶಗಳಲ್ಲೂ ಸಹ ಭಯ ಹುಟ್ಟಿಸಿಬಿಟ್ಟಿದೆ.

ರಷ್ಯಾ ಮತ್ತು ಇತರೆ ಸಮಾಜವಾದಿ, ಹಾಗೂ ಶಾಂತಿಪ್ರಿಯ ದೇಶಗಳ ಸತತ ಪರಿಶ್ರಮದಿಂದಾಗಿ ಸಾಧಿಲಾದ, ಶಸ್ತ್ರಾಸ್ತ್ರ ಸೀಮಿತಗೊಳಿಸುವ ಒಪ್ಪಂದಗಳನ್ನೂ, ಮಿಲಿಟರಿ ನೆಲೆಗಳ ಸ್ಥಾಪನೆಗೆ ಕಡಿವಾಣ ಹಾಕುವ ಒಪ್ಪಂದಗಳನ್ನೂ ರೀಗನ್ ಆಡಳಿತವು ಮುರಿದು ಹಿಟ್ಲರ್ ಶಾಹಿಯ ಹುಚ್ಚುತನದಲ್ಲಿ ವರ್ತಿಸತೊಡಗಿದೆ. ಹೊಸ ಹೊಸ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿ, ಈಗಾಗಲೇ ಆಂತಕಕಾರಿಯಾಗಿರುವ ದೇಶಗಳ ನಡುವಿನ ಕಲಹ ಕದನಗಳನ್ನು ಮತ್ತಷ್ಟು ಉಲ್ಬಣಗೊಳಿಸಿ, ಜಗತ್ತಿನಲ್ಲಿ ಶಾಂತಿ ಸ್ಥಾಪಿಸುವ ಎಲ್ಲಾ ಕ್ರಮಗಳನ್ನೂ ಅಸಾಧ್ಯವಾಗಿಸುತ್ತಿದೆ.

ಪಶ್ಚಿಮ ಯೂರೋಪ ಮತ್ತು ಅಮೇರಿಕಾ ಸಾಮ್ರಾಜ್ಯಶಾಹಿಗಳು ಎರಡನೇ ಮಹಾಯುದ್ಧ ನಂತರದಲ್ಲಿ ಕಂಡಿರದಂಥ ಅತ್ಯಂತ ತೀವ್ರಸ್ವರೂಪದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಈ ಆರ್ಥಿಕ ಬಿಕ್ಕಟ್ಟನ್ನು ಬಗೆಹರಿಸಲು ಸಾಧ್ಯವಿಲ್ಲ ಎನ್ನುವುದು– ಈ ಸರ್ಕಾರಗಳಿಗೂ, ಅಧಿಕಾರಿಗಳಿಗೂ, ಸಹ ತಿಳಿದು ಬಿಟ್ಟಿದೆ. ವಿಮೋಚನಾ

[7ನೇ ಪುಟ ನೋಡಿ]

ಸಿ.ಐ.ಟಿ.ಯು. - ಹರಿಹರದ ಸಮ್ಮೇಳನದ ಮುಂದಿರುವ ಕರ್ತವ್ಯಗಳು

[ಮಾರ್ಚ್ ೫,೬,೭ ಮತ್ತು ೮ರಂದು ಹರಿಹರದಲ್ಲಿ ಕರ್ನಾಟಕ ರಾಜ್ಯ ಸಿ.ಐ.ಟಿ.ಯು.ವಿನ ೩ನೇ ರಾಜ್ಯಸಮ್ಮೇಳನ ಜರುಗಲಿದೆ. ಈ ನಿಮಿತ್ತ ಸಿ.ಐ.ಟಿ.ಯು.ವಿನ ರಾಜ್ಯ ಸಮಿತಿ ಪ್ರಧಾನಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಈ ವಿಶೇಷ ಲೇಖನ ಬರೆದಿದ್ದಾರೆ]

1947 ಆಗಸ್ಟ್ 15ರ ನಂತರ ಈವರೆವಿಗೆ ಬಂಡವಾಳಗಾರ ಜಮೀನ್ದಾರ ವರ್ಗಗಳ ರಾಜಕೀಯ ಪಕ್ಷಗಳು ಕೇಂದ್ರದಲ್ಲೂ, ನಮ್ಮ ರಾಜ್ಯದಲ್ಲೂ ಆಡಳಿತವಹಿಸಿಕೊಂಡು ಬಂದಿವೆ. ಪರಿಣಾಮ ಏಕಸ್ವಾಮ್ಯಸ್ಥ ಬಂಡವಾಳಗಾರರ ಕುಟುಂಬಗಳ ಆಸ್ತಿಯ ತೀವ್ರ ಬೆಳವಣಿಗೆ, ಭೂಸ್ವಾಮ್ಯದಲ್ಲಿ ಮೂಲಭೂತ ಬದಲಾವಣೆಯಾಗದೆ ಕೃಷಿಕೂಲಿಗಾರರ, ಗ್ರಾಮೀಣ ಬಡವರ ಸಂಖ್ಯೆ ಹೆಚ್ಚಿದುದು, ಬಡತನ, ನಿರುದ್ಯೋಗ, ಹಣದುಬ್ಬರ, ಬೆಲೆಗಳು ಹೆಚ್ಚುತ್ತಾಹೋಗಿ ಬಡತನದ ರೇಖೆಯ ಕೆಳರುವವರ ಸಂಖ್ಯೆ ಶೇ. 70ರವರೆಗೆ ಏರಿದುದು. 1980ರ ಕೊನೆಯಲ್ಲಿ ಭಾರತದ ಅತಿದೊಡ್ಡ ಶ್ರೀಮಂತ ಬಿರ್ಲಾರ ಆಸ್ತಿ 1171·15 ಕೋಟಿ ರೂ, ಟಾಟಾರ ಆಸ್ತಿ 1102·11 ಕೋಟಿ, ಮಫತ್‌ಲಾಲ್ 317·86 ಕೋಟಿ ರೂ, ಜೆ.ಕೆ. ಸಿಂಘಾನಿಯಾ 299·57 ಕೋಟಿ ರೂ., ಥಾಪರ್ 244·06 ಕೋಟಿ ರೂ, ಐ. ಸಿ. ಐ. 228·73 ಕೋಟಿ ರೂ, ಭಾಂಗೂರ್ 220·86 ಕೋಟಿ ರೂ, ಶ್ರೀರಾಮ್ 204·79 ಕೋಟಿ ರೂ., ಆಯಿಲ್ ಇಂಡಿಯಾ 203·24 ಕೋಟಿ ರೂ, ಸಿಂಧಿಯಾ 202·81 ಕೋಟಿ ರೂ. ಈ ಪ್ರಕಾರ ಬೆಳೆದಿದೆಯೆಂದು ಕಾನೂನು ಸಚಿವ ಶಿವಶಂಕರ್ ಲೋಕಸಭೆಗೆ ತಿಳಿಸಿದ್ದಾರೆ.

ಈಗ ಸಂಸತ್ತಿನ ಮುಂದಿರುವ ರೈಲ್ವೆ ಮುಂಗಡಪತ್ರ ಮತ್ತು ಸಾಮಾನ್ಯ ಮುಂಗಡಪತ್ರಗಳಲ್ಲಿ ಸೂಚಿಸಿರುವ ಕರಗಳು ಮತ್ತು ಖೋತಾ ಬಜೆಟ್ ಏರುತ್ತಿರುವ ಬೆಲೆಗಳನ್ನು ಗಗನಕ್ಕೆ ಕೊಂಡೊಯ್ಯಲಿವೆ; ಕಾರ್ಮಿಕ-ನೌಕರರ ಜೀವನವನ್ನು, ಎಲ್ಲಾ ಶ್ರೀಸಾಮಾನ್ಯರ ಜೀವನಗಳನ್ನು ಅತೀವ ಕಷ್ಟ-ಯಾತನೆಗಳಿಗೆ ಗುರಿಮಾಡಲಿವೆ.

ಕೇಂದ್ರ ಮತ್ತು ನಮ್ಮ ರಾಜ್ಯ ಸರ್ಕಾರಗಳ ದಿವಾಳಿಕೋರ ನೀತಿಗಳ ವಿರುದ್ಧ ಪ್ರತಿಭಟನೆ, ಹೋರಾಟ, ಮುಂಬರುವ ದಿನಗಳಲ್ಲಿ ಹೆಚ್ಚಲಿವೆ. ಈ ಹೋರಾಟಗಳನ್ನು ಸದೆಬಡಿಯಲೆಂದು ಕಾಂಗ್ರೆಸ್ (ಐ) ಸರ್ಕಾರಗಳು ಸರ್ವಾಧಿಕಾರವನ್ನು ಸ್ಥಾಪಿಸುವ ದಿಸೆಯಲ್ಲಿ ಭರದಿಂದ ಮುನ್ನಡೆಯುತ್ತಿವೆ. ಈ ಸರ್ಕಾರಗಳ ಮೊದಲ ದಾಳಿ ಸಂಘಟಿತ ಕಾರ್ಮಿಕ ವರ್ಗದ ಮೇಲೆ ನಡೆಯುತ್ತಿದೆ. ರೈಲ್ವೆ ಲೋಕೋ ರನ್ನಿಂಗ್ ಸಿಬ್ಬಂದಿಯ ಮುಖಂಡರನ್ನು ರಾಷ್ಟ್ರೀಯ ಭದ್ರತಾ ಶಾಸನದನ್ವಯ ಬಂಧಿಸಿ ಅನೇಕರನ್ನು ಕೆಲಸದಿಂದ ವಜಾಮಾಡಿರುವುದು, ವಿಮಾ ನೌಕರರ ಸೇವಾನಿಯಮಗಳನ್ನು ಬದಲಿಸಲು ಸುಗ್ರೀವಾಜ್ಞೆ ಹೊರಡಿಸಿರುವುದು, ಸಾರ್ವಜನಿಕ ಕ್ಷೇತ್ರದ ಕಾರ್ಮಿಕರೊಂದಿಗೆ ಹಿಂದೆ ಮಾಡಿಕೊಂಡ ಒಪ್ಪಂದವನ್ನು ಅನುಷ್ಠಾನಕ್ಕೆ ತರದೆ ಅವರನ್ನು ದೀರ್ಘಕಾಲದ ಮುಷ್ಕರದ ಹಾದಿಗೆ ದೂಡಿರುವುದು, ಪತ್ರಿಕಾ ಸ್ವಾತಂತ್ರ್ಯದ ಮೇಲೆ ದಾಳಿ, ರೈತರ ಚಳುವಳಿ, ದುಡಿಯುವ ಜನತೆಯ ಚಳುವಳಿಗಳಲ್ಲಿ ಪೋಲೀಸರ ಗೋಲಿಬಾರು, ಪೋಲೀಸರು ಆಳುವ ಪಂಗಡಗಳ ಸೇವಕರಂತೆ ವರ್ತಿಸುತ್ತಿರುವುದು-ಈ ಹಿನ್ನೆಲೆಯಲ್ಲಿ ಸಿ.ಐ.ಟಿ.ಯು.ವಿನ ಕರ್ನಾಟಕ ರಾಜ್ಯ ಘಟಕದ ಮೂರನೆಯ ಸಮ್ಮೇಳನವು ಮಾರ್ಚ್ 5 ರಿಂದ 8ರ ವರೆಗೆ ಹರಿಹರದಲ್ಲಿ ನಡೆಯುತ್ತದೆ.

ವೇತನ, ಬೋನಸ್, ತುಟ್ಟಿ ಭತ್ತೆಗಳ ಹೆಚ್ಚಳಕ್ಕಾಗಿ, ಕಾರ್ಮಿಕರ ದಿನನಿತ್ಯದ ಪ್ರಶ್ನೆಗಳಿಗಾಗಿ ಕಾರ್ಮಿಕ ಸಂಘಗಳು ಕೆಲಸಮಾಡುತ್ತವೆ. ಭವಿಷ್ಯ ನಿಧಿ (ಪಿ. ಎಫ್.)ಯ ವ್ಯಾಪ್ತಿಗೆ ಬರುವ ಎಲ್ಲಾ ಕಾರ್ಮಿಕರಿಗೂ ಈ ಯೋಜನೆಯ ಸೌಲಭ್ಯ ದೊರೆಯಬೇಕು, ಉದ್ಯೋಗಪತಿಗಳು ಕಾರ್ಮಿಕರ ಮತ್ತು ತಮ್ಮ ವಂತಿಗೆಗಳನ್ನು ಕ್ಲುಪ್ತ ಸಮಯದಲ್ಲಿ ಕಟ್ಟಬೇಕು. ಕಾರ್ಮಿಕ ಕಾಯಿದೆಗಳಲ್ಲಿ ಈಗಿರುವ ಸವಲತ್ತುಗಳು ಎಲ್ಲಾ ಕಾರ್ಮಿಕರಿಗೂ ಸಿಕ್ಕಬೇಕು. ಕನಿಷ್ಟ ಕೂಲಿ ಹೆಚ್ಚಾಗಬೇಕು. ಒಟ್ಟಾರೆ ಪ್ರಸ್ತುತ ಕಾನೂನಿನಲ್ಲಿ ತಮಗೆ ಬರಬೇಕಾದುವನ್ನು ಪಡೆದುಕೊಳ್ಳಲು, ಬೇಡಿಕೆಗಳಿಗಾಗಿ ಕಾರ್ಮಿಕರು ಚಳುವಳಿಯನ್ನು ಐಕ್ಯ ಚಳುವಳಿಯನ್ನು ನಡೆಸಬೇಕು.

ತಮ್ಮ ಬೇಡಿಕೆಗಳಿಗಾಗಿ ಚಳುವಳಿ ನಡೆಸಲು ಕಾರ್ಮಿಕರಿಗೆ ಪ್ರಜಾಪ್ರಭುತ್ವ ಹಕ್ಕುಗಳು ಬಹಳ ಅಗತ್ಯ ಹಾಗೂ ಅಮೂಲ್ಯ. ಭರದಿಂದ ಮುನ್ನಡೆಯುತ್ತಿರುವ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಸೆಣಸಿ ಪ್ರಜಾಪ್ರಭುತ್ವ ಮತ್ತು ನಾಗರೀಕ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಕಾರ್ಮಿಕ ವರ್ಗವು ಮುಂದಾಗಬೇಕು. ಇದಕ್ಕಾಗಿ ವಿಶಾಲವಾದ ಕಾರ್ಮಿಕ ಐಕ್ಯತೆಯನ್ನು, ದುಡಿಯುವ ಜನಸಮುದಾಯದ ವಿಶಾಲ ಐಕ್ಯತೆಯನ್ನು ಸಾಧಿಸಬೇಕು.

ಒಂದೊಂದು ಕೈಗಾರಿಕೆಯಲ್ಲಿರುವ ಕಾರ್ಮಿಕರ ಸಮಾವೇಶಗಳಾಗಬೇಕು, ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಗಳ ರಚನೆಯಾಗಬೇಕು. ಈಗ ಇರುವ ಸಮನ್ವಯ ಸಮಿತಿಗಳನ್ನು ಬಲಪಡಿಸಬೇಕು.

ಸಮಾನ ಬೇಡಿಕೆಗಳಿಗಾಗಿ ರಾಜ್ಯದಲ್ಲಿ, ಜಿಲ್ಲೆಗಳಲ್ಲಿ, ವಿವಿಧ ಕೈಗಾರಿಕೆಗಳಲ್ಲಿ ಈವರೆವಿಗೆ ನಡೆದಿರುವ ಹೋರಾಟಗಳನ್ನು, ಆಗಿರುವ ಕೆಲಸವನ್ನು ವಿಮರ್ಶಿಸಿ, ಬೆಳೆದಿರುವ ಐಕ್ಯತೆಯನ್ನು ಬಲಪಡಿಸಿ, ವಿಸ್ತರಿಸಿ ಮುನ್ನಡೆಸುವ ಬಗ್ಗೆ ಸಮ್ಮೇಳನವು ವಿಚಾರ ಮಾಡಬೇಕು.

ಕೈಗಾರಿಕೆಗಳಲ್ಲಿ ಮಹಿಳೆಯರು ಗಣನೀಯ ಪ್ರಮಾಣದಲ್ಲಿದ್ದಾರೆ. ಕಾಫಿ, ಟೀ, ರಬ್ಬರ್ ತೋಟಗಳಲ್ಲಿ ಅರೆವಾಸಿಯಷ್ಟಿದ್ದಾರೆ. ಬೀಡಿ, ಗೇರುಬೀಜ, ಅಗರಬತ್ತಿ, ರೇಷ್ಮೆ ಕೈಗಾರಿಕೆಯಲ್ಲಿ ಮಹಿಳೆಯರ ಸಂಖ್ಯೆ ಅತಿ ಹೆಚ್ಚು. ದುಡಿಯುವ ಮಹಿಳೆಯರು ಎಲ್ಲಾ ಕಾರ್ಮಿಕರು ಎದುರಿಸುವ ಸಮಸ್ಯೆಗಳ ಜತೆಗೆ, ಕೆಲವು ವಿಶಿಷ್ಟ ಸಮಸ್ಯೆಗಳನ್ನು ಎದುರಿಸುತ್ತಾರೆ. ಕೆಲಸಕ್ಕೆ ನೇಮಿಸಿಕೊಳ್ಳುವುದರಲ್ಲಿ, ಮಾಡಿದ ಕೆಲಸಕ್ಕೆ ವೇತನ ಕೊಡುವುದರಲ್ಲಿ ತಾರತಮ್ಯ ಮಾಡುವುದರ ಜತೆಗೆ ಬಲಾತ್ಕಾರ, ಮಾನಭಂಗಗಳೂ ನಡೆಯುತ್ತವೆ. ಮಹಿಳಾ ಕಾರ್ಮಿಕರ ವಿಶಿಷ್ಟ ಸಮಸ್ಯೆಗಳ ಪರಿಹಾರಕ್ಕೆ ಕಾರ್ಮಿಕ ಸಂಘಗಳು ಆದ್ಯತೆಕೊಟ್ಟು ಕಾರ್ಮಿಕ ಚಳುವಳಿಯಲ್ಲಿ ಮಹಿಳೆಯರು ಪ್ರಮುಖ ಪಾತ್ರವನ್ನು ವಹಿಸುವಂತೆ ಮಾಡಿ ಕಾರ್ಮಿಕರ ಐಕ್ಯತೆಯನ್ನು ಬಲಪಡಿಸಬೇಕಾಗಿದೆ.

ಭಾಷೆ, ಧರ್ಮ, ಜಾತಿಗಳ ಹೆಸರಿನಲ್ಲಿ, 'ಮಣ್ಣಿನ ಮಕ್ಕಳ' ಹೆಸರಿನಲ್ಲಿ ಆಳುವ ವರ್ಗಗಳು-ಅವರ ಸರ್ಕಾರಗಳು, ದುಡಿಯುವ ಜನತೆಯ-ಕಾರ್ಮಿಕ ವರ್ಗದ ಐಕ್ಯತೆಯನ್ನು ಒಡೆಯಲು ಹಲವು ರೀತಿಗಳಲ್ಲಿ ಪ್ರಯತ್ನಿಸುತ್ತಾರೆ. ಒಗ್ಗಟ್ಟೇ ಕಾರ್ಮಿಕರ ಪ್ರಬಲಶಕ್ತಿ ಎಂಬುದನ್ನರಿತಿರುವ ಶೋಷಕರು ಈ ಒಗ್ಗಟ್ಟನ್ನು ಒಡೆಯುವ ಪ್ರಯತ್ನ ಮಾಡುವುದು ಸಹಜ. ದುಡಿಯುವ ಜನತೆಯ ಒಗ್ಗಟ್ಟನ್ನು ಒಡೆಯುವ ವಿಚ್ಛಿದ್ರಕಾರಿ ಶಕ್ತಿಗಳ ಬಗ್ಗೆ ಸದಾ ಎಚ್ಚರದಿಂದಿದ್ದು ಅವುಗಳನ್ನು ಸೋಲಿಸಬೇಕು.

ನಿರುದ್ಯೋಗಿಗಳ ಸಂಘಟನೆಗಾಗಿ ಅವರ ಬೇಡಿಕೆಗಳಿಗಾಗಿ ಸಂಘಟಿತ ಕಾರ್ಮಿಕರು ಹೋರಾಡಬೇಕಾಗಿದೆ. ನಿರುದ್ಯೋಗಿಗಳಿರುವುದು ಬಂಡವಾಳಶಾಹಿ ವ್ಯವಸ್ಥೆಯ ಒಂದು ಲಕ್ಷಣ. ಕಾರ್ಮಿಕರ ಹೋರಾಟಗಳನ್ನು ಪರಾಭವಗೊಳಿಸಲು ಬಂಡವಾಳಗಾರರು ನಿರುದ್ಯೋಗಿಗಳನ್ನು ಉಪಯೋಗಿಸುತ್ತಾರೆ. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ, ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ರಂಗ ಸರ್ಕಾರಗಳು ನಿರುದ್ಯೋಗ ಭತ್ತೆಯನ್ನು ಅನುಷ್ಠಾನಕ್ಕೆ ತಂದ ಮೇಲೆ ಕಾಂಗ್ರೆಸ್ (ಐ) ರಾಜ್ಯ ಸರ್ಕಾರಗಳ ಮೇಲೂ ಒತ್ತಡ ಬೆಳೆಯುತ್ತಿದೆ. ಮಹಾರಾಷ್ಟ್ರ, ಪಂಜಾಬ್ ಸರ್ಕಾರಗಳು ಸ್ವಲ್ಪ ಪರಿಹಾರಗಳನ್ನು ಪ್ರಕಟಿಸಬೇಕಾಗಿ ಬಂದಿತು. ನಮ್ಮ ರಾಜ್ಯದಲ್ಲಿ ನಿರುದ್ಯೋಗಿಗಳ ಸಂಘಟನೆಯ ಬಗ್ಗೆ ಸಮ್ಮೇಳನವು ವಿಚಾರ ಮಾಡಬೇಕು.

ಸಣ್ಣ ಉದ್ದಿಮೆಗಳಲ್ಲಿರುವ, ಹಾಗೂ ಅಸಂಘಟಿತ ಕಾರ್ಮಿಕರ, ಕೃಷಿ ಕಾರ್ಮಿಕರ ಸಂಘಟನಾ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡು ಯೋಜನೆ ಹಾಕಬೇಕಾಗಿದೆ. ಕಳೆದ ಡಿಸೆಂಬರ್ 12 ರಂದು ಬೆಂಗಳೂರಿನಲ್ಲಿ ನಡೆದ ರೈತ-ಕಾರ್ಮಿಕರ ಪ್ರದರ್ಶನದಲ್ಲಿ, ಜನವರಿಯಲ್ಲಿ ಪ್ರಾರಂಭವಾದ ರೈತರ ಮಹಾ ಪಾದಯಾತ್ರೆಗಳಲ್ಲಿ ಬೆಂಗಳೂರು, ಸಿರಾ, ದಾವಣಗೆರೆ, ಹರಿಹರ, ಹುಬ್ಬಳ್ಳಿ, ಕುಣಿಗಲ್, ತುಮಕೂರು, ನರಗುಂದ, ಚಿತ್ರದುರ್ಗ ಮೊದಲಾದ ಕಡೆ ಕಾರ್ಮಿಕರು ರೈತರ ಆತ್ಮೀಯ ಬಂಧುಗಳು ಎಂಬುದನ್ನು ತೋರಿಸಿಕೊಟ್ಟು ಕಾರ್ಮಿಕರ ಮೇಲೆ ರೈತರನ್ನು ಎತ್ತಿಕಟ್ಟುವ ಆಳುವವರ್ಗಗಳಿಗೆ ನಿರಾಸೆಯನ್ನುಂಟುಮಾಡಿದ್ದಾರೆ. ರೈತ-ಕಾರ್ಮಿಕರ ಸಖ್ಯತೆಯನ್ನು ಬಲಪಡಿಸಿ ಮುನ್ನಡೆಸುವುದನ್ನು ಕುರಿತು ಸಮ್ಮೇಳನವು ವಿಚಾರಮಾಡಬೇಕಾಗಿದೆ.

ಕಳೆದೆರಡು ವರ್ಷಗಳಲ್ಲಿ ಕಾರ್ಮಿಕ ಹೋರಾಟಗಳಿಗೆ ರಾಜ್ಯಮಟ್ಟದಲ್ಲಿ, ಸ್ಥಳೀಯವಾಗಿ, ಕೈಗಾರಿಕಾವಾರಾಗಿ ನಡೆದಿರುವ ಸೌಹಾರ್ದ ಕಾರ್ಯಾಚರಣೆಯನ್ನು ಆತ್ಮಪರಿಶೋಧಕವಾಗಿ ವಿಮರ್ಶಿಸಿ, ಪ್ರಚಲಿತ ಕಾರ್ಮಿಕ ಹೋರಾಟಗಳಿಗೆ ಬೆಂಬಲವೀಯಲು, ಮುಷ್ಕರನಿರತ ಕಾರ್ಮಿಕರ ಸ್ಥೈರ್ಯವನ್ನು ಹಿಗ್ಗಿಸಲು ಸೌಹಾರ್ದ ಕಾರ್ಯಾಚರಣೆಯನ್ನು ರೂಪಿಸಬೇಕಾಗಿದೆ.

ಸರ್ವಾಧಿಕಾರದ ಅಲೆಗಳು ಉಕ್ಕೇರಿ ಬರುತ್ತಿರುವ ಈ ಕಾಲದಲ್ಲಿ, ಪ್ರಜಾಪ್ರಭುತ್ವ ರಕ್ಷಣೆಯಲ್ಲಿ ತೊಡಗಿರುವ ಪಶ್ಚಿಮ ಬಂಗಾಳ ಮತ್ತು ತ್ರಿಪುರಗಳ ಎಡರಂಗ ಸರ್ಕಾರಗಳಲ್ಲಿ, ಕೇರಳದ ಎಡ ಮತ್ತು ಪ್ರಜಾಪ್ರಭುತ್ವರಂಗ ಸರ್ಕಾರದಲ್ಲಿ ಕಾರ್ಮಿಕ ವರ್ಗವು ತನ್ನ ಮಿತ್ರರನ್ನು ಕಾಣಬಹುದು. ಈ ಮೂರು ಸರ್ಕಾರಗಳು ಸಮಸ್ತ ದುಡಿಯುವ ಜನತೆಯ ಆಶಾಜ್ಯೋತಿಗಳಾಗಿವೆ. ಈ ಸರ್ಕಾರಗಳ ಸಾಧನೆಗಳನ್ನು ಕಾರ್ಮಿಕವರ್ಗವು ಅಭ್ಯಸಿಸಿ ಎಲ್ಲರ ನಡುವೆ ಜನಪ್ರಿಯಗೊಳಿಸಬೇಕಾಗಿದೆ. ಕಾಂಗ್ರೆಸ್ ಐ) ಪಕ್ಷದ ಜನವಿರೋಧಿ ನೀತಿಗಳಿಗೆ ಬದಲಾಗಿಈ 3 ಸರ್ಕಾರಗಳ ಜನಪರವಾದ ಧೋರಣೆಗಳಿವೆ ಎಂಬುದನ್ನು ತಿಳಿಸಿ ಈ ಧೋರಣೆಗಳ ಪರವಾಗಿ ಜನಮನವನ್ನು ಒಲಿಸಬೇಕು. ಈ ಸರ್ಕಾರಗಳ ಮೇಲೆ ಆಗುವ ದಾಳಿಗಳನ್ನು ಸಕಾಲದಲ್ಲಿ ಕಾರ್ಮಿಕವರ್ಗ ಪ್ರತಿಭಟಿಸಬೇಕು.

ಭಾರತ ಉಪಖಂಡದಲ್ಲಿಸಾಮ್ರಾಜ್ಯಶಾಹಿಗಳ ಪಿತೂರಿ, ಯುದ್ಧದ ಅಪಾಯ, ಶಾಂತಿಗಾಗಿ ಹೋರಾಟ-ಇವುಗಳ ಬಗ್ಗೆ ಕಾರ್ಮಿಕ ಸಮುದಾಯಕ್ಕೆ ಶಿಕ್ಷಣಕೊಡುವ ಬಗ್ಗೆ ಸಮ್ಮೇಳನವು ವಿಚಾರಮಾಡಬೇಕಾಗಿದೆ.

ಈ ಎಲ್ಲಾ ಕರ್ತವ್ಯ ನಿರ್ವಹಣೆಗೆ ಸಮ್ಮೇಳನವು ಕಾರ್ಯಗತವಾಗುವ ಯೋಜನೆಗಳನ್ನು ರೂಪಿಸಿ, ನಿರ್ದೇಶನಗಳನ್ನು ಕೊಟ್ಟು ಕರ್ನಾಟಕದ ಕಾರ್ಮಿಕ ಚಳುವಳಿಯು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಬೇಕಾಗಿದೆ.

●

ನೂತನ ಪದಾಧಿಕಾರಿಗಳ ಆಯ್ಕೆ

ದಿ. 12-2-81ರಂದು ಮಲ್ಲೇಶ್ವರ (ಕುದುರೆಮುಖ)ದಲ್ಲಿ ನಡೆದ ಎಚ್.ಎಸ್.ಸಿ.ಎಲ್. ಕಾರ್ಮಿಕರ ಸರ್ವಸದಸ್ಯರ ಸಭೆ ನಡೆದು, ಯೂನಿಯನ್ನಿಗೆ ಕೆಳಕಂಡ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಕಾಂ. ಕೆ. ರಾಮದಾಸ್ ಆಚಾರ್ಯರನ್ನು ಅಧ್ಯಕ್ಷರನ್ನಾಗಿ, ಕಾಂ. ಸತ್ಯನೇಸನ್ ಮತ್ತು ಬಿ. ಕೆ. ಅಡನೆ ಇವರನ್ನು ಉಪಾಧ್ಯಕ್ಷರನ್ನಾಗಿ, ಕಾಂ. ತಿಪ್ಪೇಶ್‌ರನ್ನು ಪ್ರಧಾನಕಾರ್ಯದರ್ಶಿಯನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಇದರೊಟ್ಟಿಗೆ 6 ಜನ ಪದಾಧಿಕಾರಿಗಳು, 5 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

●

ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ಸರ್ಕಾರದ ೧ ವರ್ಷ

[ಇತ್ತೀಚಿಗೆ ತಾನೇ ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ಸರ್ಕಾರವು ಒಂದು ವರ್ಷದ ಆಡಳಿತ ಅವಧಿಯನ್ನು ಯಶಸ್ವಿಯಾಗಿ ಪೂರೈಸಿತು. ಈ ನಿಮಿತ್ತ ಕೇರಳದ ಮುಖ್ಯಮಂತ್ರಿ ಇ. ಕೆ. ನಯನಾರ್ ಈ ಲೇಖನ ಬರೆದಿದ್ದಾರೆ.]

ಕಳೆದ ಒಂದು ವರ್ಷದ ಎಡ ಮತ್ತು ಪ್ರಜಾಪ್ರಭುತ್ವ ಸರ್ಕಾರದ ಸಾಧನೆಯ ಬಗ್ಗೆ ಹೇಳುವುದಾದರೆ- ಜನರಿಗೆ ಯಾವ ಭರವಸೆಯನ್ನು ಕೊಟ್ಟು ಅಧಿಕಾರಕ್ಕೆ ಬಂದಿತ್ತೋ ಅವನ್ನು ಕಾರ್ಯಗತಕ್ಕೆ ತರಲು ಸಾಧ್ಯವಾಯಿತು ಎಂಬುದು ಒಂದು ನಿಜ ಸಂಗತಿ.

ಕಳೆದ ವರ್ಷ ಬಜೆಟ್‌ನಲ್ಲಿ ಹೇಳಿದ 32 ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸಲು ಸಾಧ್ಯವಾಯಿತು. ಮುಖ್ಯವಾಗಿ ಹೇಳುವುದಾದರೆ ಎಲ್ಲಾ ತರದ ದಬ್ಬಾಳಿಕೆಗೆದುರಾಗಿ ಪಾರ್ಲಿಮೆಂಟರಿ ಹಾಗೂ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಎತ್ತಿ ಹಿಡಿಯಲು ಸಾಧ್ಯವಾಯಿತು.

ಇತರ ರಾಜ್ಯಗಳ ಹಾಗೆ ಕೇರಳದಲ್ಲೂ ಸಹ ಕಾರ್ಮಿಕರ, ರೈತರ, ಅಧ್ಯಾಪಕರ, ವಿದ್ಯಾರ್ಥಿಗಳ, ರಾಜ್ಯ ಸರ್ಕಾರೀ ನೌಕರರ, ಕೃಷಿಕೂಲಿಗಾರರ ಹೋರಾಟಗಳು ನಡೆದವು. ಆದರೆ ಇವರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಈ ಎಲ್ಲಾ ಹೋರಾಟಗಳ ಬಗ್ಗೆ ಮುಚ್ಚುಮರೆಯಿಲ್ಲದೆ ಅವರ ಸಮಸ್ಯೆಗಳನ್ನು ಚರ್ಚಿಸಿ ಸರ್ವರಿಗೂ ಅಂಗೀಕಾರವಾಗುವ ರೀತಿಯ ನಿಲುವನ್ನು ಅನುಸರಿಸಲು ಸಾಧ್ಯವಾಯಿತೆಂಬುದು. ಈ ಪ್ರಜಾಸತ್ತಾತ್ಮಕ ಧೋರಣೆ ಬಹುತೇಕ ಜನರ ಬೆಂಬಲಗಳಿಸಿತು. ಇದರ ಫಲವಾಗಿ ರಾಜಕೀಯ ಪ್ರಚೋದಿತ ಚಳುವಳಿಗಳು ಪರಾಭವಗೊಂಡವು. ಮುಖ್ಯವಾಗಿ ಕಾಂಗ್ರೆಸ್‌ನ ಕುತಂತ್ರಗಳು.

ಬಜೆಟ್‌ನಲ್ಲಿ 46.25 ಕೋಟಿ ರೂ.ಗಳ ಸಮಾಜ ಕಲ್ಯಾಣ ವ್ಯವಸ್ಥೆಗಳನ್ನು ಜಾರಿಮಾಡಲಾಗಿದೆ. ಕೃಷಿ ಕೂಲಿಗಾರರಿಗೆ ನಿವೃತ್ತಿ ವೇತನ, ನಿರುದ್ಯೋಗಿಗಳಿಗೆ ನಿರುದ್ಯೋಗ ವೇತನ, ಪತ್ರಕರ್ತರಿಗೆ ಹಾಗೂ ಚಲನಚಿತ್ರ, ರಂಗಭೂಮಿಯ ಕಲಾವಿದರರಿಗೆ ನಿವೃತ್ತಿ ವೇತನವನ್ನು ಜಾರಿಗೊಳಿಸಲು ಸಾಧ್ಯವಾಯಿತು.

ಕಳೆದ ವರ್ಷ ರಾಜ್ಯಸರ್ಕಾರದ ಸ್ವಾಮ್ಯದಲ್ಲಿರುವ ಕೈಗಾರಿಕೆಗಳಲ್ಲಿ 144.18 ಲಕ್ಷ ರೂ.ಗಳ ನಷ್ಟವಿದ್ದು ಈ ವರ್ಷ 270.36 ಲಕ್ಷ ರೂ.ಗಳ ಲಾಭವನ್ನುಂಟುಮಾಡಲು ಸಾಧ್ಯವಾಯಿತು. ನಷ್ಟಹೊಂದಿದ ಕೆಲಸದ ದಿನಗಳ ಸಂಖ್ಯೆ 17.69 ಲಕ್ಷದಿಂದ 11.60ಕ್ಕೆ ಇಳಿಯಿತು.

ಕಾರ್ಖಾನೆಗಳಲ್ಲಿ, ತೋಟಗಳಲ್ಲಿ ಹಾಗೂ ಜಮೀನಿನಲ್ಲಿ ದುಡಿಯುವ 26 ಲಕ್ಷಕ್ಕೂ ಹೆಚ್ಚಿನ ಕಾರ್ಮಿಕರಿಗೆ 71 ಕೋಟಿ ರೂ.ಗಳ ವೇತನ ಹೆಚ್ಚಳವನ್ನು ಮಾಡಲಾಯಿತು. ಇದರ ಜೊತೆಗೆ ಬೆಲೆ ಸೂಚ್ಯಂಕದ ನಿಜವಾದ ಸೌಲಭ್ಯವನ್ನು ಪಡೆಯುವಂತೆಮಾಡಿ ಲಕ್ಷಗಟ್ಟಲೆ ಕಾರ್ಮಿಕರಿಗೆ ಇದರ ಫಲ ಲಭಿಸಿತು. ರಾಜ್ಯ ಸರ್ಕಾರದ ನೌಕರರಿಗೆ ಕೇಂದ್ರಸರ್ಕಾರದ ನೌಕರರ ಸಮಾನವಾಗಿ ಕಳೆದ ವರ್ಷ 4 ಭಾರಿ ತುಟ್ಟಿಭತ್ಯ ಹೆಚ್ಚಿಸಿತು.

ಅಧಿಕಾರವನ್ನು ಜಿಲ್ಲಾ ಹಾಗೂ ಪಂಚಾಯತಿ ಮಟ್ಟಕ್ಕೆ ತರಲು ಮುಖ್ಯವಾದ ಕಾನೂನುಗಳನ್ನು ಜಾರಿಗೆ ತರಲಾಯಿತು. ಯೋಜನಾ ಮಂಡಳಿಗೆ ಹೆಚ್ಚಿನ ಅಧಿಕಾರ, ಸಂಸತ್ ಚಟುವಟಿಕೆಗಳಿಗೆ ಸಹಾಯವಾಗುವ ಸಬ್ಜೆಕ್ಟ್ ಕಮಿಟಿಗಳನ್ನು ರಚಿಸಲಾಯಿತು.

2,16000ಕ್ಕೂ ಹೆಚ್ಚು ಮನೆಗಳಿಗೆ ವಿದ್ಯುಚ್ಛಕ್ತಿಯ ಸಂಪರ್ಕವನ್ನು ಏರ್ಪಡಿಸಲಾಯಿತು. ಇಡಮಲಯಾರ್, ಕಕ್ಕಡ್ ಮತ್ತು ಕುಟ್ಟಿಯಾಡಿ ವಿದ್ಯುಚ್ಛಕ್ತಿ ಕೇಂದ್ರಗಳ ಕೆಲಸ ಮುಂದುವರಿಸಲಾಯಿತು. ಪೂಯಂಕುಟ್ಟಿ, ಮಾನಂತೋಡಿ ಮತ್ತು ಕಾರಪ್ಪಾರ ವಿದ್ಯುಚ್ಛಕ್ತಿ ಕೇಂದ್ರಗಳ ಕೆಲಸ ಪ್ರಾರಂಭಿಸಲಾಗಿದೆ.

ಭೂಸುಧಾರಣಾ ರಂಗದಲ್ಲಿ ಇ. ಎಂ. ಎಸ್. ನಂಬೂದಿರಿಪಾಡ್‌ರ ನೇತೃತ್ವದ ಪ್ರಥಮ ಕಮ್ಯುನಿಸ್ಟ್ ಸರ್ಕಾರ 1957–59ರಲ್ಲಿ ಪ್ರಾರಂಭಿಸಿದ ಕೆಲಸವನ್ನು ಮುಂದುವರಿಸುವ ಸಲುವಾಗಿ ಇದುವರಿಗೂ 37ಲಕ್ಷ ಗೇಣಿದಾರರನ್ನು ಸಾಗುವಳಿಮಾಡುವ ನೆಲದ ಒಡೆಯನನ್ನಾಗಿ ಮಾಡಲಾಗಿದೆ. 4.5 ಲಕ್ಷ ಗೇಣಿದಾರರಿಗೆ ಮನೆಕಟ್ಟುವ ಹಕ್ಕನ್ನು ಕೊಟ್ಟು ಅದಕ್ಕೆ ಒಡೆಯನನ್ನಾಗಿ ಮಾಡಿತು. ಕಳೆದ ಒಂದು ವರ್ಷದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಭೂಮಿಯ ಆಧಾರ ಪತ್ರಗಳನ್ನೂ ಹಂಚಲಾಯಿತು. ಇದರಲ್ಲಿ 15000 ಬೆಸ್ತರ ಕುಟುಂಬಕ್ಕೂ ಮತ್ತು 20,000 ಹರಿಜನರ ಹಾಗೂ ದಲಿತವರ್ಗಕ್ಕೆ ಹಂಚಲಾಯಿತು.

ಬತ್ತದ ಬೆಲೆಯನ್ನು ನಿಗದಿಮಾಡಿ ಒಂದು ಕ್ವಿಂಟಾಲ್‌ಗೆ 140ರೂ.ಗಳವರೆಗೂ ಮತ್ತು ಕಬ್ಬಿನ ಬೆಲೆಯನ್ನು ಕ್ವಿಂಟಾಲ್ ಒಂದಕ್ಕೆ 180ರೂ.ಗಳಿಗೂ ಹೆಚ್ಚಿಸಿತು. ಸಂದಿಗ್ಧ ಘಟ್ಟದಲ್ಲಿದ್ದ ಕೊಕೊ ಬೆಳೆಯನ್ನು ಸರ್ಕಾರವು ಕೆ.ಜಿ. ಒಂದಕ್ಕೆ 5-30 ರೂ.ಗಳಂತೆ ಒಟ್ಟಾಗಿಕೊಂಡು ಅದನ್ನು ಕಾಪಾಡಿತು. ಕಳೆದ ವರ್ಷ ಸಹಕಾರ ಸಂಘಗಳ ಮೂಲಕ 140 ಕೋಟಿ ಹಣವನ್ನು ರೈತರಿಗೂ ಹಾಗೂ ದಲಿತ ವಿಧಾಗದವರಿಗೂ ವಿತರಣೆ ಮಾಡಲಾಯಿತು. ಅಷ್ಟೇ ಅಲ್ಲದೆ ಕೆಳಮಟ್ಟ ವಿಭಾಗದ 1.35000 ರೈತರಿಗೆ ಸುಮಾರು 5 ಕೋಟಿ ರೂ.ಗಳ ತೆರಿಗೆ ರಿಯಾಯತಿಯನ್ನು ನೀಡಲಾಯಿತು.

41 ಪ್ರಾಥಮಿಕ ಗೃಹ ಸಹಕಾರ ಸಂಘಗಳನ್ನು ಏರ್ಪಡಿಸಿ ಲಕ್ಷ ರೂ.ಗಳ 2212 ಗೃಹನಿರ್ಮಾಣ ಯೋಜನೆಯನ್ನು ಜಾರಿಗೆ ತಂದಿದೆ. ಹರಿಜನರ ಹಾಗೂ ಗಿರಿಜನರಿಗಾಗಿ 31 ಸಹಕಾರ ಸಂಘಗಳನ್ನು ಏರ್ಪಡಿಸಿ 8.66 ಲಕ್ಷ ರೂ.ಗಳ ಸಹಾಯ ಮಾಡಿದೆ. ಹರಿಜನರು ಹಾಗೂ ಗಿರಿಜನರು ತೆಗೆದುಕೊಂಡ 21 ಲಕ್ಷ ರೂ.ಗಳ ಸಾಲಕ್ಕೆ ಬಡ್ಡಿಯನ್ನು ಪೂರ್ತಿಯಾಗಿ ಮನ್ನಾ ಮಾಡಿ 20,000 ಕುಟುಂಬಗಳಿಗೆ ಆಶ್ವಾಸನೆಯನ್ನುಂಟುಮಾಡಿದೆ. ಹರಿಜನರ ಗಿರಿಜನರಿಗಾಗಿ 16,021 ಹೆಕ್ಟಾರ್ ಭೂಮಿಯಲ್ಲಿ 884 ಕಾಲೋನಿಗಳನ್ನು ಕಟ್ಟಿಕೊಡಲಾಗಿದೆ. 25000 ಹರಿಜನರ ಕುಟುಂಬಗಳಿಗಾಗಿ ಪುಷ್ಟಿಕರ ಆಹಾರವನ್ನು ಹಂಚುವ 260 ಕೇಂದ್ರಗಳನ್ನು ಜಾರಿಗೆ ತಂದಿದೆ.

ನೀರು ಸರಬರಾಜಿಗಾಗಿ 70 ಪದ್ಧತಿಗಳನ್ನು ಏರ್ಪಡಿಸಲಾಗಿ ಅದರಲ್ಲಿ 35 ಕೇಂದ್ರಗಳನ್ನು ಹರಿಜನ ಗಿರಿಜನರ ಕಾಲೋನಿಗೆ ಮೀಸಲಾಗಿಟ್ಟಿದೆ. 45 ಕೋಟಿ ರೂ.ಗಳ ಒಂದು

ಇ. ಕೆ. ನಯನಾರ್

ಯೋಜನೆಯ ವಿವರವನ್ನು ವಿಶ್ವಬ್ಯಾಂಕಿನ ನೆರವು ಪಡೆಯುವ ಸಲುವಾಗಿ ಕೇಂದ್ರಸರ್ಕಾರಕ್ಕೆ ಸಲ್ಲಿಸಿದೆ.

ಪಂಚಾಯಿತಿಗಳ ಅಭಿವೃದ್ಧಿಗೆ, ಸಣ್ಣ ನೀರಾವರಿ ಕೆಲಸಗಳಿಗೆ, ಪ್ರೌಢ ಶಾಲೆಗಳಿಗೆ ಆರೋಗ್ಯ ಕೇಂದ್ರಗಳನ್ನು ಏರ್ಪಡಿಸಲು 7 ಅಂಶದ ಕಾರ್ಯಕ್ರಮವನ್ನು ಜಾರಿಗೆ ತಂದಿದೆ.

ಸಾರಿಗೆ ಸೌಲಭ್ಯಕ್ಕಾಗಿ 301 ಬಸ್ಸುಗಳನ್ನು ರಸ್ತೆಗಳಲ್ಲಿ ಬಿಡಲಾಗಿದೆ.

ಕೇರಳ ಸರ್ಕಾರದ ಅತ್ಯವಶ್ಯಕ ಪದಾರ್ಥಗಳ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಎಲ್ಲಾ ಪತ್ರಿಕೆಗಳೂ ಹೊಗಳಿವೆ. ಇದರ ಫಲವಾಗಿ 12000 ನ್ಯಾಯಬೆಲೆ ಅಂಗಡಿಗಳೂ, 2000 ಚಿಲ್ಲರೆ ವ್ಯಾಪಾರಮಾಡುವ ಅಂಗಡಿಗಳನ್ನೂ ಸಹಕಾರ ಸಂಘಗಳ ಮೂಲಕ ಸ್ಥಾಪಿಸಲಾಗಿದೆ. 350 ಚಿಕ್ಕ ಅಂಗಡಿಗಳನ್ನು ನಿರುದ್ಯೋಗ ಯುವಜನರು ನಡೆಸುತ್ತಿದ್ದಾರೆ. ಆಹಾರಧಾನ್ಯಗಳ ವಿತರಣೆಯನ್ನು ವೀಕ್ಷಿಸಲು ವಿಜಿಲೆನ್ಸ್ ಕಮೀಟಿಗಳನ್ನು ಏರ್ಪಡಿಸಿ ಕಳ್ಳ ಸಗಟು ವ್ಯಾಪಾರವನ್ನು ಕೊನೆಗಾಣಿಸಿದೆ. ಜನತೆಗೆ ಸುಲಭವಾಗಿ ಲಭಿಸುವ ಸಲುವಾಗಿ 18 ಅತ್ಯವಶ್ಯಕ ಆಹಾರ ಪದಾರ್ಥಗಳನ್ನು ನಿಗಧಿ ಬೆಲೆಗೆ ಮಾರಾಟ ಮಾಡಲು 400 ಕೋಟಿ ರೂ.ಗಳ ಒಂದು ಪದ್ಧತಿಯನ್ನು ಕೇಂದ್ರಸರ್ಕಾರದೆದುರು ಮಂಡಿಸಿದೆ. ಈ ಪದ್ಧತಿಯನ್ನು ಜಾರಿಗೆ ತರಲು ಅನುಮತಿ ಕೊಟ್ಟರೆ ಬೆಲೆಯೇರಿಕೆಯನ್ನು ಬಹುಮಟ್ಟಿಗೆ ತಡೆಗಟ್ಟಲು ಸಾಧ್ಯವಾಗುತ್ತದೆ.

ಕೇರಳದಲ್ಲಿ ಒಂದು ಸ್ಟುಡಿಯೋ ಕಾಂಪ್ಲೆಸ್ಸ್ ಕಟ್ಟಡವನ್ನುಕಟ್ಟಿ ಚಲನ ಚಿತ್ರರಂಗದಲ್ಲಿ ಪ್ರಗತಿಯನ್ನುಂಟುಮಾಡಿದೆ. ರಾಜ್ಯಸರ್ಕಾರದ ವಾರ್ತಾ ಚಿತ್ರಗಳು ಹಾಗೂ ವ್ಯಾಪಾರಿ ಚಿತ್ರಗಳನ್ನು ತೆಗೆಯಲು ಇದರಿಂದ ಸಾಧ್ಯವಾಗಿದೆ.

ಗರಗೆಣಸು, ರಬ್ಬರ್ ಮುಂತಾದವುಗಳನ್ನು ಬೆಳೆಸುವವರಿಗೆ ಅನೇಕ ಸೌಲಭ್ಯಗಳನ್ನು ಏರ್ಪಡಿಸಿದಷ್ಟೇ ಅಲ್ಲದೆ ಅವರಿಗೆ ತೆರಿಗೆ ವಿನಾಯತಿಯೂ ಸಹ ಮಾಡಲಾಗಿದೆ.

ಬಾಲವಾಡಿ ಅಧ್ಯಾಪಕಿಯರಿಗೆ ಸಂಬಳ ಹಾಗೂ ನಿವೃತ್ತಿವೇತನವನ್ನೂ ಹೆಚ್ಚಿಸಿದೆ. ಕೇರಳ ಖಾಸಗಿ ಅಧ್ಯಾಪಕರ ಕಲ್ಯಾಣಕ್ಕಾಗಿ 5 ಕೋಟಿ ರೂ.ಗಳ ಒಂದು ಯೋಜನೆಯನ್ನು ಜಾರಿಗೆ ತಂದಿದೆ. ದುಡಿಯುವ ಮಹಿಳೆಯರಿಗಾಗಿ ಹಾಸ್ಟಲ್ ವಸತಿಗಳನ್ನು ಮುಖ್ಯ ಪಟ್ಟಣಗಳಲ್ಲಿ ಕಟ್ಟಲು 50 ಲಕ್ಷ ರೂ.ಗಳನ್ನು ಕೊಡಲಾಗಿದೆ. ಪೋಲೀಸರ ಗೃಹ ನಿರ್ಮಾಣ ಕಾರ್ಯಕ್ಕಾಗಿ 6 ಕೋಟಿ ರೂ.ಗಳ ಒಂದು ಯೋಜನೆಯನ್ನು ಕೈಗೊಂಡಿದೆ.

ಬೆಸ್ತರ ಮಕ್ಕಳ ಶಾಲಾ ವಿದ್ಯಾಭ್ಯಾಸಕ್ಕಾಗಿ 300 ರೂ.ಗಳಿಂದ 1000 ರೂ.ಗಳ ಸ್ಕಾಲರ್‌ಷಿಪ್ ಪದ್ಧತಿಯನ್ನು ಪ್ರಾರಂಭಿಸಲಾಗಿದೆ. ಬೆಸ್ತರ ಗೃಹ ನಿರ್ಮಾಣಕ್ಕಾಗಿ ಈಗಾಗಲೆ 10,000 ಮನೆಗಳು ಪೂರ್ಣಗೊಳ್ಳಲಿದ್ದು ಮತ್ತೊಂದು 10,000 ಮನೆಗಳನ್ನು ಕಟ್ಟಿಕೊಡುವ ಯತ್ನ ನಡೆದಿದೆ. ಅವರಿಗೆ 10,000 ರೂ.ಗಳ ಜೀವವಿಮಾ ಪದ್ಧತಿಯನ್ನು ಜಾರಿಮಾಡಿದುದರಿಂದ 1.1 ಲಕ್ಷ ಬೆಸ್ತರಿಗೆ ಇದರ ಫಲ ಲಭಿಸುತ್ತಿದೆ.

ಭಾರತದಲ್ಲೆ ಪ್ರಪ್ರಥಮವಾಗಿ ಶಾಲಾ ಮಕ್ಕಳಿಗೆ ಆರೋಗ್ಯ ಚೀಟಿಯನ್ನು ಹಂಚುವ ಪದ್ಧತಿ-ಅಂದರೆ ಶಾಲಾ ಮಕ್ಕಳ ಆರೋಗ್ಯವನ್ನು ಪರೀಕ್ಷಿಸಲು ಎಲ್ಲಾ ವಿಧದ ಉಪಕರಣಗಳನ್ನೊಳಗೊಂಡ ಚಲಿಸುವ ಗಾಡಿ, ಹಾಗೂ ಡಾಕ್ಟರುಗಳು ಪ್ರತಿಯೊಂದು ವಿದ್ಯಾರ್ಥಿಯನ್ನೂ ಪರೀಕ್ಷಿಸಿ ಅವರಿಗೆ ಸೂಕ್ತ ಚಿಕಿತ್ಸೆಯನ್ನು ಮಾಡುವ ಪದ್ಧತಿ ಜಾರಿಮಾಡಲಾಗಿ 55 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಇದರ ಫಲ ಲಭಿಸಿದೆ.

ಕಳೆದ ಅನೇಕ ವರ್ಷಗಳಿಂದ ರಾಜ್ಯದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಯಾವ ಪದ್ಧತಿಯನ್ನೂ ಜಾರಿಮಾಡಲಿಲ್ಲ. ಕಳೆದ 30 ವರ್ಷಗಳಲ್ಲಿ ಕೇವಲ 381 ಕೋಟಿಗಳು ಮಾತ್ರ ಕೇಂದ್ರಸರ್ಕಾರಕೊಟ್ಟಿದೆ. ಈ ಮಲತಾಯಿ ಧೋರಣೆ ಬಗ್ಗೆ ಕೇಂದ್ರಸರ್ಕಾರದೊಡನೆ ಚರ್ಚೆ ನಡೆಸಲಾಗಿದೆ.

ರಾಜ್ಯದಲ್ಲಿ ಪ್ರಜಾಪ್ರಭುತ್ವ ವಿರೋಧಿಶಕ್ತಿಗಳು ಜನತೆಯಿಂದ ದೂರಗೊಳಿಸಲ್ಪಟ್ಟಿವೆ. ಪ್ರತಿಗಾಮಿ ಶಕ್ತಿಗಳು ಗೊಂಡಾಗಿರಿಗಳನು ಕೈಗೊಂಡು ಕಾನೂನು ಮತ್ತು ಶಿಸ್ತು ಹದಗೆಟ್ಟಿದೆ ಎಂದು ಹೇಳಲು ತೊಡಗಿದೆ. ಕೇರಳದಲ್ಲಾಗಲಿ, ಬಂಗಾಳದಲ್ಲಾಗಲಿ ಈ ಶಕ್ತಿಗಳು ಇದನ್ನೇ ಮಾಡುತ್ತಿದ್ದಾರೆ. ಎಡಪಂಥೀಯ ಪ್ರಜಾಪ್ರಭುತ್ವ ರಂಗದೊಳಗಡೆ 'ಆಯಾರಾಂ, ಗಯಾರಾಂ' ಗಳನ್ನು ಸೃಷ್ಟಿಸಲು ಕನಸುಕಾಣುತ್ತಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದದ್ದು ಇಂತಹ ಪ್ರತಿಗಾಮಿ ಶಕ್ತಿಗಳ ದಯೆಯಿಂದಲ್ಲ-ಕೇರಳದ ದುಡಿಯುವ ಜನತೆಯ ಹಾಗೂ ಭಾರತಾದ್ಯಂತ ಎಡಪಂಥೀಯ ಶಕ್ತಿಗಳ ಬೆಂಬಲದಿಂದಲೇ ಈ ಎಡ ಮತ್ತು ಪ್ರಜಾಪ್ರಭುತ್ವ ಸರ್ಕಾರ ಮುಂದುವರಿಯುತ್ತಿರುವುದು.

o

ಕೇಂದ್ರ ಸಮಿತಿಯ ನಿರ್ಣಯಗಳು

[ಹಿಂದಿನ ಸಂಚಿಕೆಯಿಂದ]

ಆದಾಯ ಮತ್ತು ವೇತನಗಳ ನೀತಿ ಬಗೆಗೆ ಯೋಜನೆಯ ಸೂಚನೆಗಳು ಬೂಟಾಟಿಕೆಯದು. ಈ ನೀತಿಯಂತೆ ದೊಡ್ಡ ಕೈಗಾರಿಕೆಗಳ ಲಾಭ ರಕ್ಷಿಸಲಾಗುತ್ತದೆ. ಮತ್ತು ವೇತನಗಳ ಮೇಲೆ ಪೂರ್ಣ ಪ್ರಮಾಣದ ದಾಳಿ ನಡೆಸಲಾಗುತ್ತದೆ. ಆದಾಯಗಳ ಬಗ್ಗೆ ಯೋಜನಾಕಾರರು ಈ ರೀತಿ ಹೇಳುತ್ತಾರೆ: "ಹೆಚ್ಚಿನ ಸಾಮರ್ಥ್ಯ ಮತ್ತು ಉತ್ಪಾದಕತೆಗೆ ಸರಿಯಾದ ಉತ್ತೇಜನ ಕೊಡಬೇಕಾದ ಅಗತ್ಯವಿರುವುದರಿಂದ, ಆದಾಯಗಳ ಪುನರ್ವಿತರಣೆಯ ಕಾರ್ಯ ಇನ್ನೂ ಕಷ್ಟಸಾಧ್ಯವಾಗಿದೆ" ಆದರೆ ಅದೇ ವೇತನಗಳ ಮಾತು ಬಂದಾಗ, ಯೋಜನಾಕಾರರಿಗೆ ತಾರತಮ್ಯ ಬಹಳ ಬೇಗ ಕಂಡು, ಅದರಲ್ಲಿ ಕೆಳಗಿನ ಹಂತಕ್ಕೆ ತಂದು ಸಮಮಾಡುವುದಕ್ಕೆ ಧಾವಿಸುತ್ತಾರೆ. ಇಷ್ಟೆ ಅಲ್ಲದೆ ಇನ್ನು ಮುಂದಿನ ಯಾವುದೇ ವೇತನ ಏರಿಕೆ ಉತ್ಪಾದಕತೆಗೆ ನೇರವಾಗಿ ಸಂಬಂಧಿಸಿರಬೇಕು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈಗಿನ ವೇತನದ ಮತ್ತು ಉತ್ಪಾದನೆಯ ವಿಧಿವಿಧಾನಗಳು ಸರಿಯಾಗಿಯೇ ನಿರ್ಧರಿಸಲ್ಪಡುತ್ತಿವೆ ಎಂದು ಇವರು ಭಾವಿಸಿವಂತಿದೆ.

ಪೂರ್ಣ ಪ್ರಮಾಣದ ಉದ್ಯೋಗ ಇರುವವರು ಅವರ ಕಡಿತವನ್ನು ನಗುಮುಖದಿಂದ ಒಪ್ಪಿಕೊಳ್ಳಬೇಕು. ಸಂಪಾದನೆಯು ಉತ್ಪಾದಕತೆಯು ಹೆಚ್ಚಳಕ್ಕೂ ನಿಜ ವೇತನ ಏರಿಕೆಗೂ ನೇರ ಸಂಬಂಧವಿರಬೇಕು. ಅಲ್ಲದೆ ಉತ್ಪಾದಕತೆ ಏರಿ ಬಹಳ ಅವಧಿ ನಂತರವೇ ವೇತನಗಳು ಏರಬೇಕು. ವಾಣಿಜ್ಯ ಮತ್ತು ಕೈಗಾರಿಕೆಗಳ ಮೂಲಕ ಉತ್ತೇಜನ ಅಗತ್ಯ. ಆದರೆ ಕಾರ್ಮಿಕರಿಗೆ ಇದರ ಅಗತ್ಯವಿಲ್ಲ. ಇದು ಯೋಜನಾಕಾರರು ಸೂಚಿಸುವ ಆದಾಯ ಮತ್ತು ವೇತನಗಳ ನೀತಿಯ ಸಾರ.

ರೈತ ಸಮೂಹದ ಸಮಸ್ಯೆಗಳ ಬಗ್ಗೆ ಹೇಳಬೇಕಾದರೆ, ಯೋಜನೆಯಲ್ಲಿ ಭೂಸುಧಾರಣೆಯನ್ನು ಬರಿ ನೆಪ ಮಾತ್ರಕ್ಕೆ ಹೆಸರಿಸಲಾಗಿದೆ. ಯಾವುದೇ ರೀತಿಯ ಜಮೀನು ಪುನರ್ವಿತರಣೆಯ ಸಲಹೆಗಳಿಲ್ಲ. ರೈತರಿಗೆ ಉತ್ತೇಜನಕಾರಿ ಬೆಲೆಗಳು ದೊರಕುತ್ತಿಲ್ಲ ಎಂಬುದನ್ನು ಗುರುತಿಸಿಯೇ ಇಲ್ಲ. ಅದರ ಬದಲು ರೈತರಿಗೆ ಕೊಡುವ ಬೆಲೆಗಳ ಏರಿಕೆ ಅಸಾಧ್ಯ ಎನ್ನಲಾಗಿದೆ. ಈ ನೀತಿ ಮತ್ತು ಸಬ್ಸಿಡಿ ಹಿಂತೆಗೆದುಕೊಳ್ಳುವ ಸಾಧ್ಯತೆಯಿಂದ ರೈತನಿಗೆ ಇನ್ನೂ ಬಲವಾದ ಏಟು ಬೀಳಲಿದೆ.

ಆರನೇ ಪಂಚವಾರ್ಷಿಕ ಯೋಜನೆ ಎಲ್ಲಾ ಸಾಮಾನ್ಯ ಜನರ ಜೀವನ ಮಟ್ಟದ ಮೇಲೆ, ತೆರಿಗೆ ಮತ್ತು ಬೆಲೆ ಏರಿಕೆಗಳಿಂದ ತೀವ್ರ ಪೂರ್ಣ ಪ್ರಮಾಣದ ದಾಳಿ ನಡೆಸಲು ಪೂರ್ವಸಿದ್ಧತೆ ನಡೆಸಿದೆ. ಕಾರ್ಮಿಕರ ವೇತನಗಳ ಮೇಲಂತೂ ಪ್ರಥಮ ದಾಳಿ.

ಇತ್ತೀಚಿನ ಎಲ್.ಐ.ಸಿ. ಸುಗ್ರೀವಾಜ್ಞೆಯ ಮೂಲಕ ತುಟ್ಟಿಭತ್ಯ ಮತ್ತು ಬೋನಸ್ ಮೇಲೆ ವಿಧಿಸಿದ ಗರಿಷ್ಠ ಮಿತಿ, ಒಪ್ಪಂದ ಪ್ರಕಾರ ಕೊಡಬೇಕಾದ ಬೋನಸ್ ನಿರಾಕರಿಸಿರುವುದು, ರೈಲ್ವೇ ಲೋಕೋ ಸಿಬ್ಬಂದಿ ಮತ್ತು ಸಾರ್ವಜನಿಕ ಉದ್ಯಮಗಳ ಕಾರ್ಮಿಕರ ಜತೆ ಮಾಡಿಕೊಂಡ ಒಪ್ಪಂದಗಳನ್ನು ಮಾನ್ಯ ಮಾಡದಿರುವುದು ಇವೆಲ್ಲಾ ಕಾರ್ಮಿಕ ವರ್ಗದ ಮೇಲೆ ಯುದ್ಧದ ಆರಂಭವೆನ್ನಬಹುದು. ಸದ್ಯದಲ್ಲೇ ಇನ್ನೂ ಹೆಚ್ಚಿನ ಸುಗ್ರೀವಾಜ್ಞೆಗಳು, ತುರ್ತು ಕಾನೂನುಗಳು ಮತ್ತು ಕಾರ್ಮಿಕರ ದಮನ ದೊಡ್ಡ ಪ್ರಮಾಣದಲ್ಲಿ ಆರಂಭವಾಗಲಿದೆ ಎಂದು ಕೇಂದ್ರ ಸಮಿತಿ ಕಾರ್ಮಿಕ ವರ್ಗಕ್ಕೆ ಈ ಮೂಲಕ ಎಚ್ಚರಿಕೆ ನೀಡುತ್ತದೆ. ಕಾರ್ಮಿಕರು ಮತ್ತು ಅವರ ಟ್ರೇಡ್‌ಯೂನಿಯನ್‌ಗಳು ಈ ಆಕ್ರಮಣವನ್ನು ಸೂಕ್ತವಾಗಿ ಎದುರಿಸಲು, ಹಿಮ್ಮೆಟ್ಟಿಸಲು ತುರ್ತು ಹಾಗೂ ಪೂರ್ಣ ಸಿದ್ಧತೆ ನಡೆಸಬೇಕಾಗಿದೆ.

ಹಣದುಬ್ಬರ ಮತ್ತು ಬೆಲೆ ಏರಿಕೆಯನ್ನು ನಿಯಂತ್ರಿಸಲು ಸರ್ಕಾರಕ್ಕೆ ಸಾಧ್ಯವಾಗದೆ ಇರುವುದರಿಂದ ಆರ್ಥಿಕ ಪರಿಸ್ಥಿತಿ ನಿಯಂತ್ರಿಸಲಾಗದಷ್ಟು ಹದಗೆಟ್ಟಿದೆ. ಜನರಿಗೆ ಇದರಿಂದ ಯಾವುದೇ ರೀತಿಯ ಪರಿಹಾರ ಕೊಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಆಡಳಿತ ಯಂತ್ರ ಭ್ರಷ್ಟಾಚಾರದಿಂದ ಪೂರ್ಣ ಕಲುಷಿತವಾಗಿದೆ. ಕೈಗಾರಿಕೆಗಳು ಅಸಮರ್ಥ ನಿರ್ವಹಣೆ, ನೌಕರಶಾಹಿ ಧೋರಣೆಗಳು ಮತ್ತು ಭ್ರಷ್ಟಾಚಾರಗಳಿಂದ ಸ್ತಂಭಿತವಾಗಿವೆ.

ರಷ್ಯಾ ಮತ್ತಿತರ ಸಮಾಜವಾದಿ ದೇಶಗಳೊಂದಿಗೆ ಕೆಲವು ಆರ್ಥಿಕ ಒಪ್ಪಂದಗಳನ್ನು ಮಾಡಿಕೊಂಡಿದ್ದಾಗ್ಯೂ, ಹಲವು ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಹೊಸ ಅನುಕೂಲಗಳನ್ನು ಮಾಡಿಕೊಡಲಾಗಿದೆ. ಸ್ವಾವಲಂಭನೆಯ ಮಾತು ಸಹ ಇದರಿಂದ ಬೂಟಾಟಿಕೆಯದಾಗಿದೆ. ಮಾತ್ರವಲ್ಲ ಇದರಿಂದ ದೇಶದ ಆರ್ಥಿಕ ಬೆಳವಣಿಗೆ ಮತ್ತು ಸ್ವಾತಂತ್ರ್ಯಕ್ಕೆ ಹಾನಿಯುಂಟಾಗಿದೆ. ಅವಶ್ಯಕವಲ್ಲದ ವಸ್ತುಗಳ ಉತ್ಪಾದನೆಯ ಕ್ಷೇತ್ರದಲ್ಲಿ ತೊಡಗಿಸಲು ಪ್ರವಾಹದಂತೆ ದೇಶದೊಳಗೆ ಮಧ್ಯ ಏಷ್ಯಾ ದೇಶಗಳಿಂದ ಪೆಟ್ರೋ-ಡಾಲರು ಹರಿಯುತ್ತಿರುವುದು ಸಹ ದೇಶದ ಆರ್ಥಿಕತೆಯ ಅಸಹಾಯಕ ಪರಿಸ್ಥಿತಿಯನ್ನಷ್ಟೇ ತೋರಿಸುತ್ತದೆ.

ವಿದೇಶ ನೀತಿ

ವಿದೇಶ ನೀತಿಯ ಪ್ರಶ್ನೆಗಳಲ್ಲಿ ಸಹ ಸರ್ಕಾರದ ಮೇಲೆ ಸಾಮ್ರಾಜ್ಯಶಾಹಿ ಶಕ್ತಿಗಳು, ಹಲವು ವಿಷಯಗಳ ಬಗೆಗಿನ ಧೋರಣೆ ಸಡಿಲಿಸುವಂತೆ ಬಲವಾದ ಒತ್ತಡ ಹಾಕುತ್ತಿವೆ. ಭಾರತದ ನೆರೆಹೊರೆಯ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಸರಬರಾಜುಮಾಡಿ ಅವುಗಳನ್ನು ಈ ಒತ್ತಡ ತರಲು ಉಪಯೋಗಿಸಲಾಗುತ್ತಿದೆ. ಇಲ್ಲಿಯವರೆಗೆ ಇಂದಿರಾ ಸರ್ಕಾರ ಅಫಘಾನಿಸ್ತಾನ ಮತ್ತು ಕಂಪೂಚಿಯಾ ನೀತಿಯನ್ನು ಕಾಪಾಡಿಕೊಂಡು ಬಂದಿದೆ. ಆದರೆ ಇದನ್ನು ಬದಲಿಸಲು ಆರ್ಥಿಕ ಒತ್ತಡ ತರಲಾಗುತ್ತಿದೆ. ಈವರೆಗೆ ಆರ್ಥಿಕ ಒತ್ತಡಗಳು ಮತ್ತು ನೆರೆಹೊರೆಯ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಸರಬರಾಜು ಮೂಲಕ ವ್ಯಕ್ತವಾಗುತ್ತಿದ್ದ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಸವಾಲನ್ನು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ನಿರ್ಲಕ್ಷಿಸುವುದು ತೀರಾ ಅಪಾಯಕಾರಿ. ಈಗ ಈ ಸವಾಲು ಅಸ್ಸಾಂನಲ್ಲಿ ಸಹ ಬಂದಿದೆ. ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮುಕ್ತ ಅವಕಾಶದ ಬೇಡಿಕೆಯಲ್ಲಿ ಸಹ ಇದೇ ಸವಾಲು ಅಡಕವಾಗಿದೆ.

ಹಲವು ಬೂರ್ಜ್ವಾ ವಿರೋಧಿ ಪಕ್ಷಗಳು ಈ ಸವಾಲಿನ ಬಗ್ಗೆ ಅಲಕ್ಷ್ಯ ತೋರಿಸಿವೆ. ಅದರಲ್ಲಿಯೂ ಭಾರತೀಯ ಜನತಾಪಕ್ಷ ಈ ಸವಾಲಿನ ಅಸ್ತಿತ್ವವನ್ನೇ ಅಲ್ಲಗಳೆದು, ದೇಶದ ವಿರುದ್ಧ ಸಾಮ್ರಾಜ್ಯಶಾಹಿ ಪಿತೂರಿಯನ್ನು ಮರೆಮಾಚಲು ಕಂಕಣ ಬದ್ಧವಾಗಿದೆ. ಅಸ್ಸಾಂ ಪ್ರತ್ಯೇಕತಾ ಚಳುವಳಿಗೆ ಅದರ ಬೆಂಬಲ ಸಂದರ್ಭ ಸಾಧಕತನದ ಪರಮಾವಧಿ ಮಾತ್ರವಲ್ಲ, ವಿಚ್ಛಿದ್ರಕಾರಕ ಶಕ್ತಿಗಳಿಗೆ ಉತ್ತೇಜನ ಸಹ.

ಜನ ಹೋರಾಟಗಳು

ಸರ್ವಾಧಿಕಾರದತ್ತ ಹೋಗುತ್ತಿರುವ ಸರ್ಕಾರದ ಜನ-ವಿರೋಧಿ ನೀತಿಗಳನ್ನು ಜನರು ಹೆಜ್ಜೆ ಹೆಜ್ಜೆಗೂ ವಿರೋಧಿಸುತ್ತಿದ್ದಾರೆ. ದೇಶದಲ್ಲಿ ಭಾರಿ ಬೆಲೆಏರಿಕೆ-ವಿರೋಧಿ ಚಳುವಳಿ ಕಂಡುಬರುತ್ತಿದೆ. ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಬಿಹಾರದ ರಾಜ್ಯಾದ್ಯಂತ ಬಂದ್‌ಗಳು ಈ ಚಳುವಳಿಯ ಹೆಗ್ಗುರುತುಗಳಾಗಿತ್ತು. ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರು ಬಸ್‌ದರ ಏರಿಕೆ ವಿರುದ್ಧ ತೀವ್ರ ಹೋರಾಟ ನಡೆಸಿದ್ದಾರೆ, ಆಂಧ್ರಪ್ರದೇಶ ಮತ್ತು ಪಂಜಾಬಗಳಲ್ಲಿ ಈ ಹೋರಾಟದಲ್ಲಿ ನಡೆದ ಗೋಲಿಬಾರುಗಳಿಂದ ಹಲವು ಪ್ರಾಣಹಾನಿಯಾಗಿದೆ. ಕಾರ್ಮಿಕರು, ನೌಕರರು ಹಲವು ಕಡೆ ಮುಷ್ಕರ ಹೂಡಿದ್ದಾರೆ. ಇದಲ್ಲದೆ ಡಾಕ್ಟರುಗಳು, ಇಂಜಿನಿಯರುಗಳಂತಹ ಜನ ವಿಭಾಗಗಳು ಸಹ ಹೋರಾಟಕ್ಕಿಳಿಯುತ್ತಿದ್ದಾರೆ. ಆದರೆ ಇವೆಲ್ಲಾ ಹೋರಾಟಗಳ ಮಧ್ಯೆ ಎದ್ದು ಕಾಣುವ ಹೋರಾಟಗಳೆಂದರೆ ಹಲವು ರಾಜ್ಯಗಳಲ್ಲಿ ಹುಟ್ಟಿ, ಆಳುವವರ್ಗದ ವಲಯಗಳಲ್ಲಿ ಮೈ ನಡುಕ ಹುಟ್ಟಿಸಿರುವ ರೈತಬಂಡಾಯಗಳು. ರೈತರನ್ನು ಬಂಧಿಸಲಾಗಿದೆ. ಅವರ ಮೇಲೆ ಗೋಲಿಬಾರು ಮಾಡಲಾಗಿದೆ. ಆದರೆ ಪ್ರದರ್ಶನಗಳು, ಹೋರಾಟಗಳು ಮುಂದುವರಿಯುತ್ತಿವೆ.

ಕೆಲವು ರಾಜ್ಯಗಳಲ್ಲಿ ಪ್ರಾರಂಭದಲ್ಲಿ ಜಮೀನುದಾರಿ ಶಕ್ತಿಗಳು ರೈತರ ಅತೃಪ್ತಿಯನ್ನು ತಮಗೆ ಬೇಕಾದ ರೀತಿಯಲ್ಲಿ ಹರಿಸಲು ಪ್ರಯತ್ನಿಸಿದವು. ಮುಖ್ಯವಾಗಿ ಗೊಬ್ಬರಗಳೇ ಮುಂತಾದ ಕೃಷಿಕ್ಷೇತ್ರದ ಅವಶ್ಯಕತೆಗಳಿಗೆ ನೀಡುತ್ತಿದ್ದ ಸಬ್ಸಿಡಿಯಲ್ಲಿ ಕಡಿತ ವಿರುದ್ಧ ಪರಿಹಾರ ಪಡೆಯುವುದು ಈ ಶಕ್ತಿಗಳ ಉದ್ದೇಶವಾಗಿತ್ತು. ಈ ಪ್ರಯತ್ನ ಆಳುವ ಒಕ್ಕೂಟದಲ್ಲಿ ಪಾಲುದಾರರಾದ ಬಂಡವಾಳಶಾಹಿ ಮತ್ತು ಜಮೀನುದಾರರ ಮಧ್ಯೆ ತಿಕ್ಕಾಟವನ್ನು ಸೂಚಿಸುತ್ತದೆ. ಆರಂಭದಲ್ಲಿ ರೈತಚಳುವಳಿಗಳು ಹೇಗೆ ಇದ್ದರೂ, ಬೆಳೆಯುತ್ತಾ ಹೋದಂತೆ ಅದು ತನ್ನದೇ ಶಕ್ತಿಪಡೆದು ರೈತನನ್ನು ಹಣ್ಣು ಮಾಡುವ ಅಧಿಕೃತ ಬೆಲೆನಿರ್ಧಾರ ನೀತಿಯನ್ನೇ ಪ್ರಶ್ನಿಸುವ ಮಟ್ಟಕ್ಕೆ ಬಂದಿದೆ.

ರೈತ ಬಂಡಾಯ

ಈ ರೀತಿಯ ವ್ಯಾಪಕ ರೈತ ಬಂಡಾಯ ಸ್ವತಂತ್ರ ಭಾರತದ ಇತಿಹಾಸದಲ್ಲೇ ಸಾಟಿ ಇಲ್ಲದ್ದು ಎಂಬುದರ ಬಗ್ಗೆ ಸಂಶಯವೇ ಇಲ್ಲ. ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿಗಳು, ಸಂಘಟಿತ ರೈತಚಳುವಳಿ ಚಾರಿತ್ರಿಕವಾಗಿ ದುರ್ಬಲವಿದ್ದ ರಾಜ್ಯಗಳಲ್ಲಿ ಸಹ ಈ ಬಂಡಾಯ ರೈತನನ್ನು ಬಡಿದೆಬ್ಬಿಸಿದೆ. ರಸ್ತೆ ತಡೆಗಳನ್ನು ಹಾಕುವ, ಸಂಚಾರಕ್ಕೆ ಅಡ್ಡಿ ಮಾಡುವ, ರಾಜ್ಯ ವಿಧಾನಸಭೆಗಳಿಗೆ ಯಾತ್ರೆ, ಘೆರಾವೋ ಮಾಡುವ ಸಾಮೂಹಿಕ ಬಂಧನಕ್ಕೊಳಗಾಗುವ, ಪೋಲೀಸರ ಲಾಠಿ ಮತ್ತು ಗುಂಡುಗಳಿಗೆ ಎದೆಯೊಡ್ಡಿ ತಮ್ಮ ಹಿತಾಸಕ್ತಿಗಳಿಗಾಗಿ ಹೋರಾಡಿ ಹುತಾತ್ಮರಾಗುವ ಮೂಲಕ ಸಾವಿರಾರು ರೈತರು ಹಿಂದೆಂದೂ ಕಾಣದ ರೀತಿಯಲ್ಲಿ ಹೋರಾಟದಲ್ಲಿ ಭಾಗವಹಿಸಿದರು. ಈ ಬಂಡಾಯಗಳು ಹೆಚ್ಚಿನ ರಾಜ್ಯಗಳಲ್ಲಿ ಸ್ವಯಂಸ್ಫೂರ್ತವಾಗಿ ಆರಂಭವಾದರೂ, ದೇಶವ್ಯಾಪಿ ಸ್ವರೂಪ ಪಡೆದು, ಕಾಂಗ್ರೆಸ್ (ಐ) ರಾಜ್ಯ ಸರ್ಕಾರಗಳು ಗಣನೀಯ ಪ್ರಮಾಣದ ರಿಯಾಯಿತಿಗಳು ನೀಡುವಷ್ಟು ಪ್ರಬಲವಾಯಿತು.

ಆಳುವಪಕ್ಷ ಮೊದಮೊದಲು ಚಳುವಳಿಯನ್ನು ವಿರೋಧಿಸಿದರೂ, ಚಳುವಳಿಯ ಪ್ರಖರತೆಯಿಂದ ಹಲವು ಕೋಟಿ ರೂ.ಗಳಾಗುವಷ್ಟು ರಿಯಾಯಿತಿ ಕೊಡಬೇಕಾಯಿತು. ಕಬ್ಬಿನ ಬೆಲೆಯನ್ನು 13ರೂ. ಯಿಂದ 23 ರೂ. ಗೇರಿಸಲಾಯಿತು. ಬತ್ತದ ಬೆಲೆಯನ್ನೂ ಏರಿಸಲಾಯಿತು.

ಎಡ ಮತ್ತು ಹಲವು ಇತರ ವಿರೋಧ ಪಕ್ಷಗಳು ಈ ಚಳುವಳಿಯಲ್ಲಿ ಮಧ್ಯೆ ಪ್ರವೇಶಿಸಿ ಚಳುವಳಿಗೆ ಸರಿಯಾದ ಹಾದಿ ತೋರಿಸಿ ಕೊಡುವ ಜವಾಬ್ದಾರಿ ವಹಿಸಿದ್ದವು. ರೈತ ಮತ್ತು ಕೃಷಿ ಕಾರ್ಮಿಕರ ಐಕ್ಯತೆ, ಸೌಹಾರ್ದತೆ ಆಧಾರಿತವಾಗಿ ಚಳುವಳಿ ಮುಂದುವರಿಯುವಂತೆ ಪ್ರಯತ್ನಪಟ್ಟವು. ಮಹಾರಾಷ್ಟ್ರ, ಬಿಹಾರ, ಆಂಧ್ರಪ್ರದೇಶ, ಪಂಜಾಬಗಳಲ್ಲಿ ಸಲ್ಲಿಸಿದ್ದ ಬೇಡಿಕೆ ಪತ್ರ (Charter of Demands) ದಲ್ಲಿ ಆಹಾರ ಸಾಮಗ್ರಿಗಳ ವಿತರಣೆ ಬೆಲೆಗಳನ್ನು ಏರಿಸಬಾರದೆಂಬ, ಕೃಷಿ ಕಾರ್ಮಿಕರಿಗೆ ಹೆಚ್ಚಿನ ವೇತನ ನಿಗದಿ ಮಾಡಬೇಕೆಂಬ ಬೇಡಿಕೆಗಳೂ ಸೇರಿದ್ದವು. ಬೂರ್ಜ್ವಾ-ಜಮೀನುದಾರಿ ಸರ್ಕಾರದ ವಿರುದ್ಧ ಚಳುವಳಿಯಲ್ಲಿ ಹೇಗೆ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ದುಡಿಯುವ ವರ್ಗಗಳ ಹಿತಾಸಕ್ತಿಯನ್ನು ಕಾಪಾಡಬಹುದು, ಒಳಗೊಳ್ಳಬಹುದು ಎಂಬುದಕ್ಕೆ ಇದು ಉಜ್ವಲ ಉದಾಹರಣೆಯಾಯಿತು.

ಸೆಪ್ಟೆಂಬರ್‌ನಲ್ಲಿ ದೆಹಲಿಯಲ್ಲಿ ನಡೆದ ಆರು ಪಕ್ಷಗಳ ಸಮಾವೇಶ ಮತ್ತು ರಾಜ್ಯಗಳಲ್ಲಿ ಸ್ಥಾಪಿತವಾದ ರಂಗಗಳು, ಈ ಹೋರಾಟಗಳನ್ನು ಸಮನ್ವಯಗೊಳಿಸಿ ಒಟ್ಟಿಗೆ ಒಂದೇ ಹೋರಾಟವಾಗುವಂತೆ ಮಹತ್ವದ ಪಾತ್ರವಹಿಸಿದವು. ಸರ್ವಾಧಿಕಾರಿ ವಿರೋಧಿ ಪ್ರತಿರೋಧಕ್ಕಾಗಿ ಹುಟ್ಟಿದ ವಿಶಾಲ ತಳಹದಿಯ ರಂಗ ರೈತಬಂಡಾಯದ ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡುವಲ್ಲಿ ಸಾರ್ಥಕವಾಯಿತು. ಇಂತಹ ವಿಶಾಲ ತಳಹದಿಯ ರಂಗವಿಲ್ಲದಿದ್ದರೆ ರೈತರ ಅತೃಪ್ತಿ ಸರಿಯಾದ ಅಭಿವ್ಯಕ್ತಿ ಇಲ್ಲದೆ ಬತ್ತಿಹೋಗುವ ಅಥವಾ ಜಮೀನುದಾರರ ಭದ್ರ ಹತೋಟಿಯಲ್ಲಿ ಮುಂದುವರಿಯುವ ಸಾಧ್ಯತೆ ಇತ್ತು.

ಸರ್ಕಾರದ ದಮನ ನೀತಿ

ಈ ರೈತಬಂಡಾಯವನ್ನು ದಮನ ನೀತಿ, ಗೋಲಿಬಾರ್‌ಗಳಿಂದ ಎದುರಿಸಲು ಸರ್ಕಾರ ಪ್ರಯತ್ನಿಸಿತು. ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡುಗಳಲ್ಲಿ ಹಲವು ರೈತರು ಇದಕ್ಕೆ ಬಲಿಯಾದರು. ಆಂಧ್ರಪ್ರದೇಶ, ಮಹಾರಾಷ್ಟ್ರ, ಪಂಜಾಬ್, ರಾಜಸ್ಥಾನ, ಹರಿಯಾಣ, ಬಿಹಾರಗಳಲ್ಲಿ ಸಾವಿರಾರು ರೈತರು ಬಂಧಿತರಾದರು. ಇವೆಲ್ಲಾ ದಮನವನ್ನು ಲೆಕ್ಕಿಸದೆ ಚಳುವಳಿ ಮುಂದುವರೆಯಿತು. ಒಮ್ಮೆ ಸಿಟಿದೆದ್ದು ನಿಂತ ಹಳ್ಳಿಯ ರೈತ ಸಮೂಹವನ್ನೂ, ನಾಯಕರೊಡನೆ ರಾಜಿಮಾಡಿಕೊಳ್ಳುವುದರಿಂದ, ಜಮೀನುದಾರರನ್ನು ಆಶ್ರಯಿಸುವುದರಿಂದ ಶಾಂತಪಡಿಸಬಹುದೆಂಬ ಸರ್ಕಾರದ ಹವಣಿಕೆ ವ್ಯರ್ಥವಾಯಿತು. ಈಗ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು, ಪಕ್ಷಗಳು ರೈತಸಮೂಹದ ಚಳುವಳಿಯನ್ನು ನಿರ್ದೇಶಿಸುವ ಮತ್ತು ಅತ್ಯಂತ ಹೀನ ಪರಿಸ್ಥಿತಿಯಲ್ಲಿರುವ ಕೃಷಿಕಾರ್ಮಿಕರ ಹೋರಾಟವನ್ನು ಇದಕ್ಕೆ ಸೇರಿಸುವಲ್ಲಿ ಇನ್ನೂ ಹೆಚ್ಚು ಬಲಗೊಂಡಿವೆ ಎನ್ನಬಹುದು.

ಏಚ್ಚೆತ್ತ ರೈತರಬಂಡಾಯ ನಮ್ಮ ದೇಶದ ಬಿಕ್ಕಟ್ಟಿನ ಹೊಸ ಹಂತದ

ಸಂಕೇತವಾಗಿದೆ. ಸರ್ವಾಧಿಕಾರಿ ಆಡಳಿತಕ್ಕೆ ಅಭದ್ರತೆಯ ಸೂಚನೆಯಾಗಿದೆ.

ಎಲ್ಲಾ ಕಡೆಯಿಂದಲೂ ಪ್ರತಿರೋಧ ಎದುರಿಸುತ್ತಿರುವ ಕಾಂಗ್ರೆಸ್ (ಐ) ಸರ್ಕಾರ ಬೆಳೆಯುತ್ತಿರುವ ಚಳುವಳಿಗಳ ಮೇಲೆ ಕ್ರೂರ ದಬ್ಬಾಳಿಕೆ ನಡೆಸುತ್ತಿದೆ. ಪಂಜಾಬಿನ, ಹಿಸ್ಸಾರ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಉತ್ತರಪ್ರದೇಶ, ಒರಿಸ್ಸಾದ ವಿದ್ಯಾರ್ಥಿಗಳು ಪೋಲೀಸು ಅತ್ಯಾಚಾರಕ್ಕೆ ಬಲಿಯಾದರು. ಒರಿಸ್ಸಾದಲ್ಲಿ ಶಾಲಾ ವಿದ್ಯಾರ್ಥಿಗಳು ಇಟ್ಟಿಗೆ, ಕಲ್ಲು ಹೊತ್ತು ಪೋಲೀಸು ಸ್ಟೇಶನ್‌ಗೆ ಪ್ರಮುಖ ಬೀದಿಗಳಲ್ಲಿ ನಗ್ನ ಮೆರವಣಿಗೆ ಹೋಗುವಂತೆ ಬಲಾತ್ಕಾರಿಸಲಾಯಿತು. ಪೋಲೀಸು ಸ್ಟೇಶನ್‌ನಲ್ಲಿ ಮಂಡಿಯೂರುವಂತೆ ಮಾಡಲಾಯಿತು.

ರಾಷ್ಟ್ರೀಯ ಭದ್ರತಾ ಶಾಸನ ರೈಲ್ವೇ ಕಾರ್ಮಿಕರು ಮತ್ತಿತರ ಮುಷ್ಕರ ನಿರತರ ವಿರುದ್ಧ ಯಾವುದೇ ನಾಚಿಕೆ, ದಾಕ್ಷಿಣ್ಯ ಇಲ್ಲದೆ ಉಪಯೋಗಿಸಲಾಗುತ್ತಿದೆ. ಬೆಂಗಳೂರಲ್ಲಿ ಮುಷ್ಕರ ನಿರತ ಕಾರ್ಮಿಕರ ಮೇಲೆ ಗೋಲಿಬಾರ ನಡೆಯಿತು. ಇವರಲ್ಲಿ ಮೂವರು ಸತ್ತರು. ಉತ್ತರಪ್ರದೇಶ ಸರ್ಕಾರ ಪ್ರತಿ ತಿಂಗಳು ಹೆಚ್ಚುಹೆಚ್ಚು ಕೈಗಾರಿಕೆಗಳಲ್ಲಿ ಮುಷ್ಕರ ನಿಷೇಧಿಸುತ್ತಿದೆ. ಎಲ್.ಐ.ಸಿ. ಸುಗ್ರೀವಾಜ್ಞೆ ಕಾರ್ಮಿಕರ ಚಳುವಳಿ ವಿರುದ್ಧ ತುರ್ತು ಪರಿಸ್ಥಿತಿ ಕ್ರಮಗಳ ಪ್ರಯೋಗದ ಪುನರಾವರ್ತನೆಯ ಆರಂಭ. ಎಲ್ಲಾ ಜನವಿಭಾಗಗಳು ಈ ದಮನವನ್ನು ಎದುರಿಸುತ್ತಿವೆ. ವಕೀಲರ ಮೇಲೆ ಹಲ್ಲೆಗಳಾಗಿವೆ. ಅವರೂ ಮುಷ್ಕರ ಮಾಡಬೇಕಾಗಿ ಬಂದಿದೆ. ಸ್ಕೂಲ್ ಪ್ರಿನ್ಸಿಪಾಲರನ್ನು ಹೊಡೆಯಲಾಗಿದೆ. ಇಂಜಿನೀಯರು, ಡಾಕ್ಟರು, ಪ್ರೊಫೆಸರ್ ಎಲ್ಲರೂ ಪೋಲೀಸ್ ದೌರ್ಜನ್ಯದ ರುಚಿ ಕಾಣುತ್ತಿದ್ದಾರೆ. ಕೇಂದ್ರದಲ್ಲಿರುವ ಸರ್ವಾಧಿಕಾರಿ ಸರ್ಕಾರ ಜನರ ಹಕ್ಕುಗಳು, ಸ್ವಾತಂತ್ರ್ಯಗಳ ಮೇಲೆ ಭಾರಿ ಆಕ್ರಮಣ ನಡೆಸಲು ಸಿದ್ಧವಾಗುತ್ತಿದೆ ಎಂದು ಕೇಂದ್ರಸಮಿತಿ ಜನರನ್ನು ಎಚ್ಚರಿಸಬಯಸುತ್ತದೆ. ಸರ್ಕಾರ ಚಳುವಳಿ ನಡೆಸುವ ಹಕ್ಕು, ವಾಕ್ ಸ್ವಾತಂತ್ರ್ಯ ಮತ್ತಿತರ ಎಲ್ಲಾ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಹವಣಿಕೆ ಹಾಕುತ್ತಿದೆ. ಈ ಬಗ್ಗೆ ಸಂತೃಪ್ತ ಮನೋಭಾವ ತೀರಾ ಅಪಾಯಕಾರಿ. ಸರ್ವಾಧಿಕಾರವನ್ನು ವಿರೋಧಿಸುವ ಎಲ್ಲಾ ಶಕ್ತಿಗಳು ಈ ಎಲ್ಲಾ ಕ್ರಮಗಳಿಗೆ ಶಕ್ತ ವಿರೋಧವನ್ನು ಸಂಘಟಿತವಾಗಿ ಒಂದುಗೂಡಿ ಕೊಡಬೇಕಾಗಿದೆ.

ಇಂದಿರಾ ಸರ್ಕಾರ ಜನರ ಬಾಯಿ ಮುಚ್ಚಲು ಹೊಸ ಅಸ್ತ್ರಗಳನ್ನು ಸಿದ್ಧವಾಗಿಟ್ಟುಕೊಂಡಿದೆ. ರಾಷ್ಟ್ರೀಯ ಭದ್ರತಾ ಶಾಸನದ ನಂತರ, ನ್ಯಾಯಾಂಗದ ಮೇಲೆ ಆಕ್ರಮಣ, ಪಾರ್ಲಿಮೆಂಟರಿ ಪದ್ಧತಿಯನ್ನು ರದ್ದು ಮಾಡಿ ಅಧ್ಯಕ್ಷೀಯ ಸರ್ಕಾರ ಸ್ಥಾಪಿಸುವತ್ತ ಮೂರನೇ ಹೆಜ್ಜೆ. ನ್ಯಾಯಾಂಗದ ಗಂಭೀರತೆಯನ್ನು ನಷ್ಟಮಾಡುವ ಶೈಲಿಕ ಪ್ರಯತ್ನವೇ, ಎರಡು ಹೈಕೋರ್ಟು ನ್ಯಾಯಾಧೀಶರ ವರ್ಗಾವಣೆ. ಇದನ್ನು ವಕೀಲರು ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರತಿಭಟಿಸಿವೆ.

ಈ ಮಾದರಿಯ ನಾಗರಿಕ ಸ್ವಾತಂತ್ರ್ಯಗಳು ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಹಲ್ಲೆ; ಆರ್ಥಿಕ ಬಿಕ್ಕಟ್ಟು ಪರಿಹರಿಸಲು ಜನಸಾಮಾನ್ಯರು ಬಲಿಪಶುಗಳಾಗುವುದು; ಇವುಗಳ ಮಧ್ಯೆ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ ಸರ್ಕಾರಗಳ ಮುನ್ನಡೆ ಗಮನಾರ್ಹವಾದದ್ದು. ಇವುಗಳು ಜನಸಾಮಾನ್ಯನಿಗೆ ನಿಷ್ಠೆಯಿಂದ ಸೇವೆ ಸಲ್ಲಿಸಿವೆ. ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಿವೆ. ಆರ್ಥಿಕ ಹೋರಾಟಗಳಲ್ಲಿ ಶೋಷಿತರ ಪರವಾಗಿ ತೊಡಗಿವೆ. ಕೇಂದ್ರಸರ್ಕಾರ ಬೇಕೆಂತಲೇ ಹೊರಿಸಿದ ಆರ್ಥಿಕ ನಿರ್ಬಂಧಗಳ ಮಧ್ಯೆಯೂ ಈ ಮೂರು ಸರ್ಕಾರಗಳು ಜನಸಾಮಾನ್ಯನಿಗೆ ನ್ಯಾಯ ದೊರಕಿಸಿಕೊಟ್ಟಿವೆ. ಪ್ರಜಾಪ್ರಭುತ್ವ ರಕ್ಷಿಸಿವೆ. ಈ ಮೂರು ಸರ್ಕಾರಗಳು ರಾಷ್ಟ್ರೀಯ ಭದ್ರತಾ ಶಾಸನ ಅಥವಾ ಇನ್ನಾವುದೇ ರೀತಿಯ ಮುನ್ನೆಚ್ಚರಿಕೆ ಸ್ಥಾನಬದ್ಧತೆ ಕಾಯಿದೆ ಉಪಯೋಗಿಸಲು ನಿರಾಕರಿಸಿವೆ. ಇವು ಸರ್ವಾಧಿಕಾರದ ವಿರುದ್ಧ ಹೋರಾಡುತ್ತಿರುವ ಪ್ರಜಾಸತ್ತಾತ್ಮಕ ಶಕ್ತಿಗಳ ಮುಂದುವರಿದ ತುಕಡಿಗಳು ಆಗಿವೆ. ಇದನ್ನು ಮನಗಾಣದೆ ಕೆಲವು ವಿರೋಧ ಪಕ್ಷಗಳು, ಇವುಗಳನ್ನು ಉರುಳಿಸುವ ಕಾಂಗ್ರೆಸ್ (ಐ) ಪಿತೂರಿಗೆ ಸಹಾಯ ಮಾಡುತ್ತಿವೆ.

ಎಡರಂಗ ಮತ್ತು ಎಡ ಪ್ರಜಾಸತ್ತಾತ್ಮಕ ರಂಗದ ಮುಂದುವರಿಯುತ್ತಿರುವ ಅಸ್ತಿತ್ವವೇ ಮತ್ತು ಜನರ ಮಧ್ಯೆ ಹೆಚ್ಚುತ್ತಿರುವ ಅವರ ಪ್ರತಿಷ್ಠೆಯೇ ಸರ್ವಾಧಿಕಾರಿ ಶಕ್ತಿಗಳಿಗೆ ದೊಡ್ಡ ಹಿಂದೇಟು. ಆದರೆ ಕಾಂಗ್ರೆಸ್ (ಐ) ತನ್ನ ಪಿತೂರಿಗಳನ್ನು ಮುಂದುವರಿಸುತ್ತಿದೆ. ಜನರು ಇದರ ವಿರುದ್ಧ ಒಗ್ಗಟ್ಟಾಗಿ ಹೋರಾಡಬೇಕಾಗಿದೆ.

ಯೋಜನಾ ಮೂಲಗಳನ್ನು ಹಂಚುವುದರಲ್ಲಾಗಲೀ, ಕೆಲಸಕ್ಕೆ ಆಹಾರ ಕಾರ್ಯಕ್ರಮದಲ್ಲಾಗಲೀ ಅಥವಾ ಹೊಸ ಕೈಗಾರಿಕೆಗಳನ್ನು ಮಂಜೂರುವಲ್ಲಾಗಲೀ ಇಂದಿರಾ ಸರ್ಕಾರ ಪ್ರತಿಯೊಂದು ಬಗೆಯಲ್ಲೂ ಈ ಮೂರು ರಾಜ್ಯಗಳ ವಿರುದ್ಧ ಭೇದಭಾವದಿಂದ ವರ್ತಿಸುತ್ತಿದೆ. ಕಾಂಗ್ರೆಸ್ (ಐ) ನಾಯಕರು ಹಾಗೂ ಕೇಂದ್ರ ಮಂತ್ರಿಗಳು ಪ್ರತಿದಿನ ಅವರ ಮೇಲೆ ಸುಳ್ಳು ದೂಷಣೆ ಹೊರಿಸುವುದು ಮತ್ತು ಅವರನ್ನು ಬೆದರಿಸುವುದನ್ನು ಮಾಡುತ್ತಿದ್ದಾರೆ. ಪ್ರಧಾನಮಂತ್ರಿಯವರೂ ಇದಕ್ಕೆ ತಮ್ಮ ಸ್ವರ ಸೇರಿಸುತ್ತಾರೆ. ಈ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆಯನ್ನು ನಿರ್ಮಿಸುತ್ತಿದೆ. ಸರಕಾರದ ಮೇಲೆ ದಾಳಿಮಾಡಲು ಯೋಜನೆಗಳನ್ನು ಮಾಡಲಾಗುತ್ತಿದೆ. ಈ ಸರ್ಕಾರಗಳ ಮೇಲೆ ನಡೆಸುವ ದಾಳಿ ಎಲ್ಲಾ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಪೀಠಿಕೆ. ದೇಶದ ಎಲ್ಲಾ ಸರ್ವಾಧಿಕಾರವಿರೋಧೀ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳು ಈ ಸರ್ಕಾರಗಳನ್ನು ರಕ್ಷಿಸಿ ಕಾಪಾಡಬೇಕು.

ಈ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವಾಲಯ ಆಫೀಸ್ ಮೆಮೋರಂಡಂನ ಕುರಿತಾಗಿಯೂ ಕೇಂದ್ರಸಮಿತಿ ಪ್ರಬಲ ಪ್ರತಿಭಟನೆ ವ್ಯಕ್ತಪಡಿಸಿತು. ಮೆಮೋರಂಡಂನ ಪ್ರಕಾರ ಸರ್ಕಾರೀ ಸೇವೆಯಲ್ಲಿ ನೌಕರಿ ಪಡೆಯುವಾಗ ಬೇರೆ ರಾಜ್ಯಗಳಿಗೂ ಅನ್ವಯವಾಗುವ ಪೋಲೀಸ್ ತಪಾಸಣೆ ಮಾತ್ರವಲ್ಲದೆ ಪಶ್ಚಿಮ ಬಂಗಾಳ, ಕೇರಳ ಹಾಗೂ ತ್ರಿಪುರಾ ರಾಜ್ಯಗಳ ಅಭ್ಯರ್ಥಿಗಳ ಮಟ್ಟಿಗೆ ಗುಪ್ತಚರ ವಿಭಾಗದ ತಪಾಸಣೆಯೂ ಆಗತ್ಯವೆಂದು ಹೇಳಿದೆ. ಈ ಮೂರು ರಾಜ್ಯಗಳಲ್ಲಿ ಎಡನಾಯಕತ್ವದ ಸರ್ಕಾರಗಳಿವೆ ಎಂಬ ಒಂದೇ ಕಾರಣಕ್ಕಾಗಿ ಇವುಗಳ ವಿರುದ್ಧ ನಡೆಸುತ್ತಿರುವ ರಾಜಕೀಯ ಭೇದಭಾವದ ವರ್ತನೆಯೇ ಸರಿ.

ಈ ರೀತಿಯ ಭೇದಭಾವವರ್ತನೆಯನ್ನು ತಮಿಳುನಾಡು, ಜಮ್ಮು ಮತ್ತು ಕಾಶ್ಮೀರದ ಕಾಂಗ್ರೆಸ್ (ಐ) ಯೇತರ ಸರ್ಕಾರಗಳ ವಿರುದ್ಧವೂ ನಡೆಸಲಾಗುತ್ತಿದೆ ಎಂಬುದನ್ನೂ ಗಮನಿಸಬೇಕು.

ಕೇರಳದ ಮುಖ್ಯಮಂತ್ರಿ ತಮ್ಮ ಸರ್ಕಾರದ ಮೊದಲ ವಾರ್ಷಿಕೋತ್ಸವದ ಸಂದರ್ಭದಲ್ಲಿ ಆಕಾಶವಾಣಿಯ ತ್ರಿವೇಂಡ್ರಂ ಕೇಂದ್ರದಿಂದ ಪ್ರಸಾರ ಭಾಷಣಮಾಡಲು ಅವಕಾಶ ನಿರಾಕರಿಸಲಾಯಿತು ಎಂಬುದನ್ನು ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳು ಗಮನಿಸಬೇಕು. ಇದರ ಬೆನ್ನ ಹಿಂದೇ ಜನರನ್ನು ತಪ್ಪುದಾರಿಗೆಳೆಯುವ ಸುಳ್ಳು ಪ್ರಚಾರವೂ ನಡೆಯಿತು. ಇದೇನೂ ಅಪರೂಪದ ಘಟನೆಯಲ್ಲ. ರಾಜ್ಯಗಳ ಹಕ್ಕುಗಳು ಹಾಗೂ ಅಧಿಕಾರಗಳನ್ನು ಮೊಟಕುಗೊಳಿಸಿ ಅದನ್ನು ಹೆಚ್ಚುಹೆಚ್ಚಾಗಿ ಕೇಂದ್ರ ಸರ್ಕಾರದಲ್ಲಿ ಕೇಂದ್ರೀಕರಿಸುವ ಕಾಂಗ್ರೆಸ್(ಐ)ನ ವರ್ತನೆ ಬಲಗೊಳ್ಳುತ್ತಿದೆ. ಇದು, ಈ ಹಿಂದೆಯೂ ನಡೆದಂತೆ ಸರ್ವಾಧಿಕಾರದ ಕಡೆಗೆ, ರಾಜ್ಯಗಳ ಸ್ವಾಯತ್ತತೆಯನ್ನು ಮೊಟಕು ಮಾಡುವ ಕಡೆಗೆ ಮುನ್ನುಗ್ಗುವುದರ ಒಂದು ಅಂಗ.

ಕಾಂಗ್ರೆಸ್ (ಐ) ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಕಾನೂನು ಮತ್ತು ವ್ಯವಸ್ಥೆಯಲ್ಲುಂಟಾಗಿರುವ ಅಸ್ತವ್ಯಸ್ತತೆ ಬಿಕ್ಕಟ್ಟಿನ ತೀವ್ರತೆ ಮತ್ತು ಇಂದಿರಾ ಸರ್ಕಾರದ ದಿವಾಳಿತನಕ್ಕೆ ಮತ್ತಷ್ಟು ಸಾಕ್ಷಿ.

ಡಕಾಯಿತರಿಂದ ಆಗಾಗ ನಿಯಮಿತವಾಗಿ ನಡೆಯುತ್ತಿರುವ ರೈಲು ಲೂಟಿಗಳು, ದೇಶದ ಹಾಗೂ ರಾಜ್ಯಗಳ ರಾಜಧಾನಿಗಳಲ್ಲಿ ನಡೆಯುತ್ತಿರುವ ಕೊಲೆಗಳು, ಹೆಂಗಸರನ್ನು ಅಪಹರಿಸಿಕೊಂಡುಹೋಗಿ ಗೂಂಡಾಗಳು ಹಾಗೂ ಪೋಲೀಸ್ ಸ್ಟೇಶನ್‌ನಲ್ಲಿ ನಡೆಸುತ್ತಿರುವ ಅತ್ಯಾಚಾರಗಳು, ಹೆಂಗಸರಿಗೆ ಭದ್ರತೆಯ ಅಭಾವ, ಜನರಿಂದ ಹಣ ಸೆಳೆಯುತ್ತಿರುವ ಗೂಂಡಾಗಳಿಂದ ನಗರಗಳ ವ್ಯಾಪಕ ಕ್ಷೇತ್ರದಲ್ಲಿ ಹಾಗೂ ಕೊಳಚೆಗಳ ಪ್ರದೇಶಗಳ ಅಧಿಕಾರ ಇತ್ಯಾದಿ ಆಡಳಿತದ ಹಾಗೂ ಸಮಾಜದ ಬಿಕ್ಕಟ್ಟಿಗೆ ಸ್ಪಷ್ಟ ಉದಾಹರಣೆಗಳು.

ಜನರು ಪೋಲೀಸರ ಅನಿಯಂತ್ರಿತ ಹಾಗೂ ಗೂಂಡಾ ವರ್ತನೆಯಿಂದ ತೊಂದರೆಗೀಡಾಗಿದ್ದಾರೆ. ಸರ್ಕಾರಕ್ಕೆ ಈ ಪೋಲೀಸರನ್ನು ಹತೋಟಿಯಲ್ಲಿಡಲು ಸಾಧ್ಯವಾಗಿಲ್ಲ. ಬಿಹಾರದ ಕುರುಡಾಗಿಸಿದ ಘಟನೆ, ಸಮಸ್ತೀಪುರ ಜೈಲಿನೊಳಗಿನ ಗೋಲಿಬಾರು ಹಾಗೂ ಕೊಲೆಗಳು, ಬಾಗ್‌ಪತ್ ಮತ್ತು ದಭೋಯಿಯಂತಹ ಘಟನೆಗಳು ಹಾಗೂ ಅಪರಾಧಿಗಳನ್ನು ದಂಡಿಸುವಲ್ಲಿ ಸರ್ಕಾರದ ವಿಫಲತೆ ಇತ್ಯಾದಿ ಜನರನ್ನು ಪೋಲೀಸರು ಹಾಗೂ ಸಮಾಜಘಾತುಕ ಶಕ್ತಿಗಳ ಹಾವಳಿಗೆ ತುತ್ತಾಗಿಸಿದೆ. ಪರಿಣಾಮವಾಗಿ ರಾಜಕೀಯದಿಂದ ದೂರವಿರುವ ಮೂಕ ಜನಜಂಗುಳಿಯೂ ಪೋಲೀಸ್ ಠಾಣೆಗಳನು ಸುತ್ತುವರಿಯಲಾರಂಭಿಸಿದೆ.

ದೇಶದಲ್ಲಿ ಕೋಮು ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿದೆ. ಬೇರೆಬೇರೆ ಭಾಗಗಳಲ್ಲಿ ಕೋಮು ಘಟನೆಗಳನ್ನು ತಡೆಯುವುದರಲ್ಲಿ ಸರ್ಕಾರ ವಿಫಲವಾಗಿದೆ. ಕೋಮುವಾದಿಗಳ, ವಿಶೇಷವಾಗಿ ಉನ್ಮತ್ತ ಕೋಮುವಾದಿಯಾದ ಆರ್. ಎಸ್. ಎಸ್. ಕೋಮು ಗಲಭೆಗಳನ್ನೆಬ್ಬಿಸಲು ಕಾರಣವಾಗಿವೆ. ಅದೇ ಪ್ರತಿಕ್ರಿಯಾವಾದೀ ಆರ್. ಎಸ್. ಎಸ್. ಕೇರಳದಲ್ಲಿ ಕಾಂಗ್ರೆಸ್ (ಐ)ನೊಂದಿಗೆ ಕೈಮಿಲಾಯಿಸಿ ದಶಕಗಳಿಂದ ಬಂದಿರುವ ಕೋಮು ಐಕ್ಯತೆಯನ್ನು ಬಿಗಡಾಯಿಸುವ ಉದ್ದೇಶದಿಂದ ಸಿ.ಪಿ.ಐ.(ಎಂ) ಹಾಗೂ ರಾಜ್ಯಸರ್ಕಾರದ ಮೇಲೆ ಹಲ್ಲೆ ನಡೆಸುತ್ತಿದೆ. ಅಲ್ಪಸಂಖ್ಯಾತರನ್ನು ರಕ್ಷಿಸಲು, ಜನರ ಬಿಕ್ಕಟ್ಟನ್ನು ಬೆಳೆಸಲು ಹಾಗೂ ಪ್ರಜಾಸತ್ತಾತ್ಮಕ ಚಳುವಳಿ ಮುನ್ನಡೆ ಸಾಧಿಸಲು ಆರ್. ಎಸ್. ಎಸ್.ನ್ನು ಪ್ರತ್ಯೇಕಿಸಿ ಅದರ ಎದುರು ಹೋರಾಟ ನಡೆಸುವುದು ಈಗ ಪ್ರಜಾಸತ್ತಾತ್ಮಕ ಚಳುವಳಿ ಮಾಡಬೇಕಾದ ತುರ್ತಿನ ಕೆಲಸವಾಗಿದೆ.

ಸರ್ವಾಧಿಕಾರ ವಿರೋಧೀ ಶಕ್ತಿಗಳ ಬಲವರ್ಧನೆಯಾಗುತ್ತಿದೆ. ಹಾಗೂ ಅವು ಸರ್ವಾಧಿಕಾರವಾದದ ದಾಳಿಗಳನ್ನು ಎದುರಿಸಲು ತಯಾರಾಗುತ್ತಿದೆ. ಸರ್ವಾಧೀಕಾರದ ಶಕ್ತಿಗಳ ವಿರುದ್ಧ ಸಾಧ್ಯವಾದಷ್ಟು ವಿಶಾಲ ತಳಹದಿಯ ಪ್ರತಿರೋಧ ಚಳುವಳಿಯನ್ನು ನೇತೃತ್ವವನ್ನು ಎಡ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳು ಸರಿಯಾದ ರೀತಿಯಲ್ಲಿ ವಹಿಸಿದರೆ ತನ್ನ ಆಂತರಿಕ ಭೇದಭಾವದಿಂದ ಬಲಹೀನವಾಗಿರುವ, ಜನರಿಂದ ದೂರವಾಗಿರುವ ಸರ್ವಾಧಿಕಾರವಾದೀ ಪಕ್ಷವನ್ನು ಸುಲಭವಾಗಿ ಸೋಲಿಸಬಹುದು ಹಾಗೂ ಅಧ್ಯಕ್ಷೀಯ ಮಾದರಿ ವ್ಯವಸ್ಥೆಯ ಅವರ ಯೋಜನೆಯನ್ನು ಜಗುಟಿ ಹಾಕಬಹುದು. ಈ ರೀತಿಯ ಪ್ರತಿರೋಧವನ್ನು ಸಂಘಟಿಸಿ, ಬಲಪಡಿಸಲು ಈ ಶಕ್ತಿಗಳ ಒಗ್ಗಟ್ಟಿನಿಂದ ಮಾತ್ರಸಾಧ್ಯ.

ಆಗಲೇ ದೆಹಲಿಯಲ್ಲಿ ಆರುಪಕ್ಷಗಳ ರಾಷ್ಟ್ರೀಯ ಸಮಾವೇಶದೊಂದಿಗೆ ಆರಂಭವಾದ ಹಲವು ಪಕ್ಷಗಳ ವಿಶಾಲರಂಗ ರಾಜಕೀಯ ಪ್ರತಿರೋಧ ಹಾಗೂ ಐಕ್ಯತೆಯ ತೀವ್ರ ಪ್ರೇರಣೆಯನ್ನು ಹುಟ್ಟಿಸುವಲ್ಲಿ ಯಶಸ್ವಿಯಾಗಿದೆ. ರೈತರ ಅಸಂತುಷ್ಟಿಯ ನಡುವೆ ಪ್ರವೇಶಿಸಿ ಅವರ ಚಳುವಳಿಗೆ ನೇತೃತ್ವಕೊಡಲು ಅದಕ್ಕೆ ಸಾಧ್ಯವಾಗಿದೆ. ಕಿಸಾನ್ ಸಮನ್ವಯ ಸಮಿತಿಯ ಕರೆಯಮೇಲೆ ಮಾರ್ಚ್ 16ರಂದು ನಡೆಯಲಿರುವ ಕಿಸಾನ್ ಮತಪ್ರದರ್ಶನ ರೈತರನ್ನು ಸಂಘಟಿಸಿ ನ್ಯಾಯಕ್ಕಾಗಿ, ಯೋಗ್ಯಬೆಲೆ ಹಾಗೂ ಕೃಷಿ ಕಾರ್ಮಿಕರ ವೇತನಕ್ಕೆ ಸಂಬಂಧಪಟ್ಟ ಬೇಡಿಕೆಗಳಿಗಾಗಿ ಅವರನ್ನು ಪ್ರೇರಿಸುವಲ್ಲಿ ಇನ್ನೊಂದು ಹೆಜ್ಜೆಯಾಗಲಿದೆ. ಕಾರ್ಮಿಕರ ಹಾಗೂ ನೌಕರರ ಎಲ್ಲಾ ಸಂಘಟನೆಗಳು, ಕಸಬುದಾರರು ಹಾಗೂ ಇತರರು ಸೌಹಾರ್ದ ಸೂಚಕವಾಗಿ ಈ ಮತಪ್ರದರ್ಶನದಲ್ಲಿ ಭಾಗವಹಿಸಿದರೆ ಈ ಚಳುವಳಿಯ ಮುನ್ನಡೆಗೆ ಪ್ರೇರಕವಾಗಬಹುದು. ಕೇಂದ್ರಸಮಿತಿ ಸಮಸ್ತ ಕಾರ್ಮಿಕವರ್ಗ ಹಾಗೂ ಕಾರ್ಮಿಕಸಂಘಗಳು ರೈತರಿಗೆ ಬೆಂಬಲಕೊಡಬೇಕೆಂದೂ ದಿಲ್ಲಿ ಹಾಗೂ ಸುತ್ತಮುತ್ತಲಿನ ಕಾರ್ಮಿಕವರ್ಗ ಈ ಮತಪ್ರದರ್ಶನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದೂ ಕರೆಕೊಡುತ್ತದೆ.

ಎಲ್ಲಾ ಪಕ್ಷಗಳು ಹಾಗೂ ಶಕ್ತಿಗಳು ಸಂದರ್ಭದ ಗಂಭೀರತೆಯನ್ನು ತಿಳಿಯಬೇಕೆಂದೂ ಪ್ರಜಾಪ್ರಭುತ್ವದ ವಿರುದ್ಧ ಯಾವ ದಿನವಾದರೂ ಕ್ಷಿಪ್ರ ಕ್ರಾಂತಿ ನಡೆಯುವ ಸುಲಭದ ಬಗ್ಗೆ ಅರಿತುಕೊಳ್ಳಬೇಕೆಂದೂ ಕೇಂದ್ರಸಮಿತಿ ಕರೆಕೊಡುತ್ತದೆ. ಆರು ಪಕ್ಷಗಳ ಸೌಹಾರ್ದತೆಯನ್ನು ಬಲಪಡಿಸಿ ಸರ್ವಾಧಿಕಾರವಾದದ ವಿರುದ್ಧ ಅದಮ್ಯ ಶಕ್ತಿಯಾಗಿ ಮುನ್ನಡೆಯಬೇಕೆಂದೂ ಒತ್ತಾಯಿಸುತ್ತದೆ.

ಪಶ್ಚಿಮ ಬಂಗಾಳ, ತ್ರಿಪುರಾ ಹಾಗೂ ಕೇರಳ ಈ ಮೂರು ರಾಜ್ಯ ಸರ್ಕಾರಗಳ ವಿರುದ್ಧ ಸರ್ವಾಧಿಕಾರೀ ಸರ್ಕಾರ ಹೂಡಿರುವ ಸಂಚನ್ನು ವಿಫಲಗೊಳಿಸಬೇಕು. ರೈತರ ಹಾಗೂ ರೈತಕಾರ್ಮಿಕರ ಬೇಡಿಕೆಗಳನ್ನು ಸಾಧಿಸಲು ರೈತಹೋರಾಟವನ್ನು ಮುಂದುವರಿಸಬೇಕು, ಎಲ್ಲಾ ತೆರಿಗೆ ಹೊರೆ, ಹೆಚ್ಚುತ್ತಿರುವ ಬೆಲೆಯೇರಿಕೆಯ ಹೊರೆ ವಿರುದ್ಧ ಹೋರಾಡಬೇಕು ಎಂದು ಕೇಂದ್ರಸಮಿತಿ ಜನತೆಗೆ ಹಾಗೂ ಅವರ ಸಂಘಟನೆಗಳಿಗೆ ಕರೆಕೊಡುತ್ತದೆ. ಕಾರ್ಮಿಕರ ಹಾಗೂ ನೌಕರರ ಹಕ್ಕುಗಳು ಹಾಗೂ ಜೀವನಮಟ್ಟ ಮೇಲೆ ನಡೆಯಲಿರುವ ದಾಳಿಗಳಿಗೆ ಬಲವಾದ ಪ್ರತಿರೋಧ ಒಡ್ಡಲು ಒಗ್ಗಟ್ಟಾಗಬೇಕೆಂದು ಎಲ್ಲಾ ಕಾರ್ಮಿಕಸಂಘಗಳ ಕೇಂದ್ರಗಳಿಗೆ ಕರೆಕೊಡುತ್ತದೆ. ನ್ಯಾಯಾಂಗದ ಅವಹೇಳನವನ್ನು, ಅದನ್ನು ಕಾರ್ಯಾಂಗ ನಮ್ರ ಏಜಂಟನನ್ನಾಗಿಸುವ ಪ್ರಯತ್ನಗಳನ್ನು ಪ್ರತಿಭಟಿಸಬೇಕೆಂದು ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ಕರೆಕೊಡುತ್ತದೆ. ಪ್ರಜಾಸತ್ತಾತ್ಮಕ ಹಕ್ಕುಗಳನ್ನುಹಾಗೂ ನಾಗರಿಕ ಸ್ವಾತಂತ್ರ್ಯಗಳನ್ನು ರಕ್ಷಿಸಬೇಕೆಂದೂ, ಜನರ ಮೇಲೆ ಅಧ್ಯಕ್ಷೀಯ ಮಾದರಿಯ ಸರ್ಕಾರವನ್ನು ಹೇರಬೇಕೆಂಬ ಸರ್ವಾಧಿಕಾರೀ ಸರ್ಕಾರದ ಸಂಚನ್ನು ಚಿವುಟಿ ಹಾಕಬೇಕೆಂದು ಜನತೆಗೆ ಕರೆ ಕೊಡುತ್ತದೆ.

o

ಶಿವಮೊಗ್ಗ ಜಿಲ್ಲಾಸಮಿತಿ ಸಭೆ

ತಾ. 22-2-81ನೇ ಭಾನುವಾರ ಬೆಳಿಗ್ಗೆ 11 ಘಂಟೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿವಮೊಗ್ಗ ಜಿಲ್ಲಾ ಸಮಿತಿ ಸಭೆ ಸೇರಿತ್ತು. ಕಾರ್ಯದರ್ಶಿ ಕಾಂ. ಕೆ. ಚಂದುಕುಟ್ಟಿಯವರು ಪಾರ್ಟಿ ಚಟುವಟಿಕೆಗಳ ಬಗ್ಗೆ ವರದಿ ಮಾಡಿದರು. ವರದಿಯ ಮೇಲೆ ದೀರ್ಘ ಚರ್ಚೆ ನಡೆದ ನಂತರ ಕೆಳಗೆ ಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿದರು.

1) ಹೊಸನಗರ ತಾಲ್ಲೂಕು ವರಾಹಿ ಯೋಜನೆಯಿಂದ ಮುಳುಗಡೆ ಆಗುವ ಪ್ರದೇಶದ ಮನೆ, ಜಮೀನು ಕಳೆದುಕೊಳ್ಳುವ ಸಾವಿರಾರು ಕುಟುಂಬಗಳಿಗೆ ಪರಿಹಾರ ಮತ್ತು ಪುನರ್ವಸತಿ ಸೌಕರ್ಯ ಕ್ರಮ ತೆಗೆದುಕೊಳ್ಳದೆ ಇರುವ ಆಡಳಿತ ವರ್ಗದ ಧೋರಣೆಯನ್ನು ಈ ಸಭೆಯು ಖಂಡಿಸುತ್ತದೆ ಮತ್ತು ಮುಳುಗಡೆ ಪ್ರದೇಶದ ಜನಗಳ ನ್ಯಾಯವಾದ ಹೋರಾಟಕ್ಕೆ ಈ ಸಭೆಯು ತನ್ನ ಪೂರ್ಣ ಬೆಂಬಲವನ್ನು ಕೊಡುತ್ತದೆ.

2) ಬೆಂಗಳೂರಿನಲ್ಲಿ ನಡೆಯುತ್ತಿರುವ ಕೇಂದ್ರದ ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಕಾರ್ಮಿಕರ ನ್ಯಾಯವಾದ ಹೋರಾಟಕ್ಕೆ ಸಭೆಯು ಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತದೆ. ಸರ್ಕಾರದ ಲೆಕ್ಕ ಪ್ರಕಾರ ಮುಷ್ಕರದಿಂದ ಉಂಟಾದ 105 ಕೋಟಿ ರೂಪಾಯಿ ನಷ್ಟದಿಂದ 8 ವರ್ಷದ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬಹುದಿತ್ತು. ಆದರೆ ಸಾಮ್ರಾಜ್ಯಶಾಹಿ ಧೋರಣೆಯನ್ನು ಅನುಸರಿಸುತ್ತಿರುವ ಕೇಂದ್ರ ಸರ್ಕಾರದ ನೀತಿಯನ್ನು ಈ ಸಭೆಯು ಖಂಡಿಸುತ್ತದೆ.

3) ನಗರದಲ್ಲಿ ಇತ್ತೀಚೆಗೆ ಉಂಟಾದ ಅಶಾಂತಿ ಬಗ್ಗೆ (ಕೆಲವರು ಕೋಮು ಗಲಭೆ ಎಂದು ಹೇಳುತ್ತಾರೆ) ಸಭೆ ಚರ್ಚೆ ಮಾಡಿ, ಇದು ಅಲ್ಪಸಂಖ್ಯಾತ ಜನಾಂಗ ವಿರೋಧ ನೀತಿಯನ್ನೇ ಅನುಸರಿಸಿಕೊಂಡು ಬರುತ್ತಿದ್ದ ಒಂದು ಪಕ್ಷದ ಪ್ರಚೋದನೆಯೇ ಈ ಅಶಾಂತಿಗೆ ಮೂಲಕಾರಣವಾಗಿದೆ. ಅಕಸ್ಮಾತ್ ಸಂಭವಿಸಿದ ಘಟನೆಯಿಂದ ನಿರಪರಾಧಿ ಶ್ರೀ ಗೋವಿಂದರಾಜುರವರ ಮರಣ ಒಂದು ಬಿಟ್ಟರೆ ಜನರ ಮಧ್ಯೆ ಯಾವ ಜಗಳವೂ ನಡೆದಿಲ್ಲ. ಎರಡು ಕಡೆಯಿಂದಲೂ ಪ್ರಚೋದನೆ ಇದ್ದರೂ ಶಿವಮೊಗ್ಗ ನಗರದ ಪ್ರಜೆಗಳು ಗಲಭೆಗಳಿಗೆ ಅವಕಾಶ ಕೊಟ್ಟಿಲ್ಲ. ಇದು ಪ್ರಶಂಸನೀಯ. ಈ ಸಂದರ್ಭದಲ್ಲಿ ಕೆಲವು ಬೆಂಕಿ ಪ್ರಕರಣಗಳೂ, ಕಳ್ಳತನವೂ ನಡೆದಿದೆ. ತುಕ್ಕು ಹಿಡಿದ ಲಾಟಿಯಿಂದ ನಿರಪರಾಧಿಗಳ ಮೇಲೆ ಕೆಲವು ಪ್ರಯೋಗಗಳೂ ಆಗಿವೆ. ಕೆಲವರು ಹೇಳುವ ಹಾಗೆ ನಗರದಲ್ಲಿ ಕೋಮುಗಲಭೆ ನಡೆದಿಲ್ಲವೆಂದು ಪಕ್ಷದ ಅಭಿಪ್ರಾಯವಾಗಿದೆ.

ಸಭೆಯಲ್ಲಿ ನಡೆದ ಚರ್ಚೆಯಲ್ಲಿ ಕಾಮ್ರೇಡುಗಳಾದ ಕೆ. ಎಂ. ಶ್ರೀನಿವಾಸ್, ಶಿವಶಂಕರ್, ಮಹಮ್ಮದ್ ರಫಿ. ಸತ್ಯಪಾಲನೆ ಮುಂತಾದವರು ಭಾಗವಹಿಸಿದರು.

ಕಾಂ. ಶಿವಶಂಕರರವರ ಮದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

○

ರೀಗನ್ ಆಡಳಿತ ರಾಕ್ಷಸೀ ದಮನದ ಸಿದ್ಧತೆಗಳು

(2ನೇ ಪುಟದಿಂದ)

ಸಮರಗಳ ಮುನ್ನಡೆ, ಸಮಾಜವಾದಿ ರಾಷ್ಟ್ರಗಳ ಪ್ರಗತಿ, ಹಿಂದುಳಿದ ದೇಶಗಳ ಬೆಳವಣಿಗೆಯ ಒತ್ತಡ, ಇದರಿಂದಾಗಿ ತಮ್ಮ ನಿಯಂತ್ರಣ ಸಡಿಲವಾಗುತ್ತಾ ಬಿಕ್ಕಟ್ಟು ಮತ್ತಷ್ಟು ತೀಕ್ಷ್ಣವಾಗುತ್ತದೆ. ತಮ್ಮ ಕುಮರಿಹೋಗುತ್ತಿರುವ ಹಿಡಿತವನ್ನು ಯಾವ ಕ್ರಮದಿಂದಲಾದರೂ, ಎಷ್ಟೇ ಕ್ರೌರ್ಯದಿಂದಲಾದರೂ ಉಳಿಸಿಕೊಳ್ಳುವ ಹಠವನ್ನು ಸಾಮ್ರಾಜ್ಯಶಾಹಿ ವರ್ಗಗಳು ಹಿಡಿಯುತ್ತಿವೆ. ಇದರ ಪರಿಣಾಮವಾಗಿಯೇ ಪಶ್ಚಿಮ ಯೂರೋಪಿನಲ್ಲಿ ನವನಾಜಿ ಚಳುವಳಿಗಳು ಹುಟ್ಟಿಕೊಂಡಿವೆ. ರೀಗನ್ ಆಡಳಿತವು ನೇಜಿ ಗುಣಗಳನ್ನು ಪಡೆಯುತ್ತಿದೆ.

ಆರ್ಥಿಕ ಬಿಕ್ಕಟ್ಟಿಗೆ ಪರಿಹಾರವೆಂದು, ಭಾರೀ ಹಣವಂಬ್ಬರದಿಂದ ಪಾರಾಗಲು ರೀಗನ್ ಆಡಳಿತವು ಶೇ. 30ರಷ್ಟು ಕರಗಳನ್ನು ರದ್ದುಗೊಳಿಸಿತು. ಆದರೆ ಇದೇನೂ ಜನಸಾಮಾನ್ಯರ ಮೇಲಿನ ಕರಭಾರವನ್ನು ಕಡಿಮೆಗೊಳಿಸಿದುದಲ್ಲ. ಕಡಿತಗೊಳಿಸಿದ ಕರಗಳೆಲ್ಲವೂ ಮೇಲ್ವರ್ಗದ ಜನರಿಗೆ ನೀಡಿದ ಪರಿಹಾರವಾಗಿದೆ. ಇದರಿಂದ ಆಂತರಿಕ ಉಳಿತಾಯವು ಹೆಚ್ಚಿ ಬಂಡವಾಳ ಹೂಡಿಕೆಗೆ ಅನುಕೂಲವಾಗುವುದೆಂದು ಆಶಿಸಲಾಗಿದೆ.

ಶೇಕಡಾ 30ರಷ್ಟು ಕರಗಳನ್ನು ತೆಗೆದು ಹಾಕಿದುದರಿಂದ ಉಂಟಾಗುವ ಬಜೆಟ್ ಕೊರತೆಯನ್ನು ಜನಕಲ್ಯಾಣಕ್ಕೆಂದು ಖರ್ಚು ಮಾಡುತ್ತಿದ್ದ ನಿಧಿಯಲ್ಲಿ ಕಡಿತಗೊಳಿಸಿ ತುಂಬಿ ತೆಗೆಯಲಾಗುತ್ತದೆ. ಇದರಿಂದ ಅಮೇರಿಕದ ಅತ್ಯಂತ ತುಳಿತಕ್ಕೊಳಗಾದ ನೀಗ್ರೋ ಜನಾಂಗಕ್ಕೆ ಸಿಗುತ್ತಿದ್ದ ಕೆಲವು ಸವಲತ್ತುಗಳನ್ನು ಪರಿಹಾರ ಕಾರ್ಯಗಳನ್ನು ಮೊಟಕುಗೊಳಿಸಲಾಯಿತು. ನಿರುದ್ಯೋಗಿಗಳಿಗೆ ಹಾಗೂ ಕಾರ್ಮಿಕ ವರ್ಗಕ್ಕೆ ಸಿಗುತ್ತಿದ್ದ ಪರಿಹಾರದಲ್ಲಿಯೂ ಕಡಿತಗೊಳಿಸಲಾಯಿತು.

ಹೀಗೆ ಆಂತರಿಕವಾಗಿ ನೀಗ್ರೋ ಜನರ ಮೇಲೆ, ಕಾರ್ಮಿಕರು, ನಿರುದ್ಯೋಗಿಗಳ ಮೇಲೆ ಆರ್ಥಿಕ ಹಲ್ಲೆ ನಡೆಸುವುದೂ, ಬಾಹ್ಯವಾಗಿ ವಿಮೋಚನಾ ಸಮರಗಳನ್ನು ಹತ್ತಿಕ್ಕಿ ಹಿಂದುಳಿದ ದೇಶಗಳ ಸ್ವತಂತ್ರ ಅಸ್ತಿತ್ವವನ್ನು, ಕೆಡಗುವುದೂ, ನಿಶಸ್ತ್ರೀಕರಣಗಳನ್ನು ತಿರಸ್ಕರಿಸಿ, ಮಿಲಿಟರಿ ನೆಲೆಗಳನ್ನು, ಮಿಲಿಟರಿ ಬಲವನ್ನೂ ಹೆಚ್ಚಿಸಿಕೊಂಡು ರೀಗನ್ ಆಡಳಿತವು ಜಗತ್ತಿನಾದ್ಯಂತ ತನ್ನ ರಾಕ್ಷಸೀ ದಮನದ ನೀತಿಯನ್ನು ಸಾರಿಕೊಂಡಿದೆ.

○

ಮಹಿಳಾ ಕಾರ್ಮಿಕರ ಪ್ರತಿಭಟನೆ

ತಾ. 30-1-1981 ರಂದು ಚಿಕ್ಕಮಗಳೂರು ನಗರದ ಮಲೆನಾಡು ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಕಾಫಿ ಸಂಸ್ಕರಣಮಾಡುವ ವಿಭಾಗದ ಸುಮಾರು 150ಜನ ಮಹಿಳಾ ಕಾರ್ಮಿಕರು ಕ್ಯೂರಿಂಗ್ ವರ್ಕ್ಸ್ ಒಳಗಡೆಯೇ ಇದ್ದು ಮುಷ್ಕರ ಪ್ರಾರಂಭಿಸಿದರು. ಈ ಮುಷ್ಕರಕ್ಕೆ ಕಾರಣ ಸಂಸ್ಕರಣಮಾಡಲು ಕೊಡುತ್ತಿದ್ದ ಕಾಫಿಯು ತೀರಾ ಕೆಳಮಟ್ಟದ್ದು ಹಾಗೂ ಗಲೀಜಾಗಿ ಇದ್ದಿತು. ಈ ತರದ ಕಾಫಿಯನ್ನು ದಿನವೊಂದಕ್ಕೆ ಕೇವಲ 10 ಕೆ.ಜಿ.ಯಷ್ಟನ್ನು ಮಾತ್ರ ಸಂಸ್ಕರಣಮಾಡಲು ಸಾಧ್ಯವಾಗುತ್ತಿತ್ತು. ಆ ಪ್ರಕಾರ ಒಬ್ಬ ಮಹಿಳಾ ಕಾರ್ಮಿಕಳಿಗೆ ದಿನವೊಂದಕ್ಕೆ ಕೇವಲ 60 ಪೈಸೆ ಮಾತ್ರ ದೊರೆಯುತ್ತದೆ. ಇದನ್ನು ಪ್ರತಿಭಟಿಸಿ ಮಹಿಳಾ ಕಾರ್ಮಿಕರು ಮುಷ್ಕರ ಮುಂದುವರೆಸಿದರು. ತಾ. 31-1-81 ರಂದು ಆಡಳಿತ ವರ್ಗದವರು ಸಂಘದ ಕಾರ್ಯದರ್ಶಿ ಕಾಂ. ಎ. ಕೆ. ವಿಶ್ವನಾಥರನ್ನು ಆಡಳಿತ ಮಂಡಳಿಯವರು ಮಾತುಕತೆಗೆ ಆಹ್ವಾನಿಸಿದರು. ಈ ಮಾತುಕತೆಗೆ ಮಹಿಳಾ ಕಾರ್ಮಿಕ ಪ್ರತಿನಿಧಿಗಳ ಸಮ್ಮುಖದಲ್ಲಿ ನಡೆಯಿತು. ಆದರೆ ಮಾಲೀಕರ ಹಠಮಾರಿತನದಿಂದಾಗಿ ಯಾವ ಒಪ್ಪಂದಕ್ಕೂ ಬರಲಾಗಲಿಲ್ಲ. ನಂತರ ಕಾರ್ಮಿಕರು ಕ್ಯೂರಿಂಗ್ ವರ್ಕ್ಸ್‌ನ ಒಳಗಡೆಯೇ ಇದ್ದು ಮುಷ್ಕರ ಮುಂದುವರೆಸಿದರು. ತಾ. 1-2-81 ರಂದು ಸಂಘದಿಂದ ಆಡಳಿತ ಮಂಡಳಿಯವರಿಗೆ ಒಂದು ಬೇಡಿಕೆ ಪತ್ರವನ್ನು ಸಲ್ಲಿಸಿ ಹಾಲೀ ಸಂಸ್ಕರಣ ಮಾಡುತ್ತಿರುವ ಕೆಳಮಟ್ಟದ ಕಾಫಿಗೆ ದಿನವೊಂದಕ್ಕೆ 75 ಪೈಸೆ ಕೊಡಬೇಕೆಂದು ಕೇಳಲಾಯಿತು.

ಬೇಡಿಕೆ ಪತ್ರಕ್ಕೆ ಆಡಳಿತ ಮಂಡಳಿಯಿಂದ ಯಾವ ಉತ್ತರವೂ ಬರಲಿಲ್ಲ. ತಾ. 5-2-81ರಂದು ಆಡಳಿತ ಮಂಡಳಿಯವರು 12 ಜನ ಮಹಿಳಾ ಕಾರ್ಮಿಕರನ್ನು ಕೆಲಸದಿಂದ ಅಮಾನತ್ತುಗೊಳಿಸಿ ಹಾಗೂ 27 ಜನರನ್ನು ಕೆಲಸದಿಂದ ವಜಾಮಾಡಿ ನೋಟೀಸನ್ನು ಜಾರಿಮಾಡಲು ಪ್ರಯತ್ನಿಸಿದರು. ಆದರೆ ಮಹಿಳಾ ಕಾರ್ಮಿಕರು ಇದನ್ನು ಪ್ರತಿಭಟಿಸಿ ನೋಟೀಸನ್ನು ತೆಗೆದುಕೊಳ್ಳದೆ ನಿರಾಕರಿಸಿದರು. ನಂತರ ತಾ. 5-2-1981ರ ಸಂಜೆ ಸಂಘದ ಕಛೇರಿಯಲ್ಲಿ ಕಾರ್ಮಿಕರ ಸಭೆ ನಡೆದು ತಾ. 6-2-81 ರಿಂದ ಆಡಳಿತವರ್ಗದ ಕಾರ್ಮಿಕ ವಿರೋಧಿ ನೀತಿಯನ್ನು ವಿರೋಧಿಸಿ ಕ್ಯೂರಿಂಗ್ ವರ್ಕ್ಸ್‌ನ ಮುಂಭಾಗದಲ್ಲಿ ಧರಣಿ ನಡೆಸಲು ತೀರ್ಮಾನಿಸಲಾಯಿತು.

ಸಭೆ ಮುಗಿಯುವ ವೇಳೆಯಲ್ಲಿ ನಗರದ ಇನ್ನೊಂದು ಕ್ಯೂರಿಂಗ್ ವರ್ಕ್ಸ್‌ನ ಮ್ಯಾನೇಜರ್‌ರವರು ಸಂಘದ ಕಛೇರಿಗೆ ಬಂದು ಕಾರ್ಮಿಕರ ಕುಂದು ಕೊರತೆಗಳನ್ನು ವಿಚಾರಿಸಿ ನಂತರ ಮಲೆನಾಡು ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಆಡಳಿತ ಮಂಡಳಿಯೊಡನೆ ಪುನರ್ ಸಂಧಾನಕ್ಕೆ ವ್ಯವಸ್ಥೆಮಾಡುವುದಾಗಿ ತಿಳಿಸಿ ಉದ್ದೇಶಿತ ಧರಣಿ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ಕೇಳಿಕೊಂಡರು.

6-2-81ರ ಬೆಳಿಗ್ಗೆಯಿಂದ ಸಂಘದ ಪದಾಧಿಕಾರಿಗಳು ಆಡಳಿತ ಮಂಡಳಿಯವರು ಮಾತುಕತೆ ಪ್ರಾರಂಭಿಸಿದರು. ಅಂದು ಸಂಜೆ 5 ಗಂಟೆಯವರೆಗೆ ಮಾತುಕತೆ ನಡೆದು ಒಪ್ಪಂದಕ್ಕೆ ಬರಲಾಯಿತು. ನಂತರ ಒಪ್ಪಂದ ಆದ ಮೇಲೆ ಸಂಜೆ 5 ಗಂಟೆಗೆ ಮಹಿಳಾ ಕಾರ್ಮಿಕರು ಕೆಲಸ ಪ್ರಾರಂಭಿಸಿದರು.

●

ಎಸ್. ಎಫ್. ಐ. ಮಹಿಳಾ ವಿಭಾಗ

ಮಹಿಳಾ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಮಹಿಳೆಯರನ್ನು, ಎಸ್.ಎಫ್.ಐ, ನೇತೃತ್ವದಲ್ಲಿ ಸಂಘಟಿಸುವ ಉದ್ದೇಶದಿಂದ ಇದೇ ತಾ. 14-2-81ರಂದು ಹೋಟೆಲ್ ವುಡ್ ಸೈಡಿನ ಅಪೊಲೋ ಹಾಲ್‌ನಲ್ಲಿ ಒಂದು ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಸಮಾರಂಭದ ಉದ್ಘಾಟನೆಯನ್ನು ಕೇರಳ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಮಾಜಿ ಅಧ್ಯಕ್ಷೆ ಶ್ರೀಮತಿ ದೇವಕಿ ವಾರಿಯರ್ ನೆರವೇರಿಸಿದರು. ಅವರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು (ಮಹಿಳಾ) ಕೇವಲ ಪುಸ್ತಕದ ಜ್ಞಾನವನ್ನು ತಿಳಿದುಕೊಳ್ಳುವುದು ಮಾತ್ರವಲ್ಲದೆ, ಸುತ್ತುಮುತ್ತಲಿನ ಸಮಾಜದ ಆಗುಹೋಗುಗಳ ಬಗ್ಗೆಯೂ ಗಮನ ಹರಿಸಬೇಕೆಂದು ಕರೆಯಿತ್ತರು.

ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ತೋಟದ ವಿವೇಕ ಜ್ಯೂನಿಯರ್ ಕಾಲೇಜಿನ ನಿವೃತ್ತ ಪ್ರಾಯಪಾಲರಾದ ಶ್ರೀ ಕೆ. ರಾಮಚಂದ್ರ ಉಡುಪರು ಎಸ್. ಎಫ್. ಐ. ನ ಧ್ಯೇಯೋದ್ದೇಶ, ಘೋಷಣೆಗಳ ಮತ್ತು ಸಂಘಟನೆಯ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ನೀಡಿದರು. ಎಸ್.ಎಫ್.ಐ. ರಾಜ್ಯ ಸಮಿತಿಯ ಅಧ್ಯಕ್ಷರಾದ ಜಯಕುಮಾರ್‌ರವರು ಸಭೆಗೆ ಶುಭ ಕೋರಿದರು.

ಸಭೆಗೆ ಆಗಮಿಸಿದ ಮಂಗಳೂರಿನ ಡಾ॥ ಸುಶೀಲಾ, ಎಂ.ಬಿ.ಬಿ.ಎಸ್. ಇವರು ಹಿಂದಿನಿಂದ ಇಂದಿನವರೆಗೆ ನಮ್ಮ ಸಮಾಜ, ಮಹಿಳೆಯನ್ನು ನಡೆಸಿಕೊಂಡು ಬಂದ ರೀತಿಯನ್ನು ವಿವರಿಸಿ, ಇಂದಿನ ನಮ್ಮ ಸಮಾಜದಲ್ಲಿ ಇರುವ ಮಹಿಳೆಯರ ಸಮಸ್ಯೆಗಳನ್ನು ಮತ್ತು ಪರಿಹಾರೋಪಾಯಗಳನ್ನು ಬಹಳ ಮಾರ್ಮಿಕವಾಗಿ ತಿಳಿಯ ಹೇಳಿದ್ದಾರೆ. ಈ ಸಮಾರಂಭಕ್ಕೆ ಆಗಮಿಸಿದ ಬಿ. ಮಾಧವರು, "ಮಹಿಳೆಯರ ಶೋಷಣೆ ರಹಿತ ಜೀವನ ನಿರೂಪಣೆಗಾಗಿ, ಸಮಾಜದ ಬದಲಾವಣೆ ಆಗಲೇಬೇಕು" ಎಂಬುದನ್ನು ತಿಳಿಸಿದರು.

ಸಭೆಯ ಅಧ್ಯಕ್ಷರಾದ, ಕುಂದಾಪುರದ ಪ್ರಗತಿಪರ ಮಹಿಳಾ ಸಂಘಟನೆಯ ಕು॥ ವಸಂತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಿಕೊಟ್ಟರು. ಎಸ್.ಎಫ್.ಐ. ಮಹಿಳಾ ವಿಭಾಗದ ಸಂಚಾಲಕಿಯಾದ ಕು॥ ಪಿ. ಉಮಾಮಹೇಶ್ವರಿಯವರು ಸ್ವಾಗತ ಭಾಷಣ ಮಾಡಿದರು. ಕು॥ ಆಶಾ ವಂದಿಸಿದರು.

●

ಮಂಜೇಶ್ವರ ಬ್ಲಾಕ್ ಡಿ. ವೈ. ಎಫ್. ಐ. ಸಮ್ಮೇಳನ

15-2-81ರ ರವಿವಾರ ಮಂಜೇಶ್ವರ ಬ್ಲಾಕ್ ಡಿ. ವೈ. ಎಫ್. ಐ.ನ ಸಮ್ಮೇಳನವು ಡಾ॥ ಪಿ. ಕೆ. ಆರ್. ವಾರಿಯರ್ ಅವರು ಉದ್ಘಾಟಿಸುವುದರೊಂದಿಗೆ ಪ್ರಾರಂಭವಾಯಿತು. ಕಾಂ. ಚಂದ್ರಹಾಸ ಶೆಟ್ಟಿ, ಕಾಂ. ಅಬ್ದುಲ್ ರಹಮಾನ್ ಮಾಸ್ತರ್ ಮತ್ತು ಕಾಂ. ಮಹಾಬಲ ಶೆಟ್ಟಿಯವರು ಅಧ್ಯಕ್ಷ ಮಂಡಳಿಯಲ್ಲಿದ್ದರು.

ಪ್ರತಿನಿಧಿಗಳನ್ನು ಉದ್ದೇಶಿಸಿ ಕಾಂ. ಬಿ. ಮಾಧವ, ಕೆ. ಬಾಲಕೃಷ್ಣನ್, ಭಾಸ್ಕರನ್ ಮಾಸ್ತರ್ ಮತ್ತು ಕಾಂ. ಪಿ. ರಾಘವನ್ ಮೊದಲಾದವರು ಮಾತನಾಡಿದರು.

ಬ್ಲಾಕ್ ಕಾರ್ಯದರ್ಶಿ ಕಾಂ. ವಸಂತರವರು ಸಭೆಯಲ್ಲಿ ವರದಿ ಮಂಡಿಸಿದರು. ಚರ್ಚೆಯ ನಂತರ ವರದಿಯು ಮಂಜೂರಾಯಿತು.

ನಂತರ ಬ್ಲಾಕ್ ಕಮಿಟಿಗೆ, ಕಾಂ. ವಸಂತರನ್ನು ಅಧ್ಯಕ್ಷರನ್ನಾಗಿ, ಕಾಂ. ಮಹಾಬಲ ಶೆಟ್ಟಿಯವರನ್ನು ಕಾರ್ಯದರ್ಶಿಯನ್ನಾಗಿ ಚುನಾಯಿಸಲಾಯಿತು. ಸಾಯಂಕಾಲ ಯುವಜನರ ಬೃಹತ್ ಮೆರವಣಿಗೆ ನಡೆಯಿತು. ನಂತರ ಹೊಸಂಗಡಿ ಗೇಟಿನ ಬಳಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಂ. ಪಿ. ಕೆ. ಮಹಮ್ಮದ್ ವಹಿಸಿದ್ದರು.

●

ಮಾರ್ಚ್ ೧೧ರಂದು ಅಖಿಲ ಭಾರತ ಕಾರ್ಮಿಕರ ಮುಷ್ಕರ

(1ನೇ ಪುಟದಿಂದ)

ಗಳುವುದಿಲ್ಲವೆಂದು ಸರ್ಕಾರ ಆಶ್ವಾಸನೆ ನೀಡಿದ್ದರೂ ಸಹ ಕಾರ್ಮಿಕ ಸಂಘಗಳ ಮುಖಂಡರ ಮೇಲೆ ಮತ್ತು ಕಾರ್ಯಕರ್ತರ ಮೇಲೆ ಅನೇಕ ಹೋರಾಟಗಳಲ್ಲಿ ಪ್ರಯೋಗಿಸಲಾಗಿದೆ.

ಕಾರ್ಮಿಕರ ಹೋರಾಟದ ಸಂದರ್ಭಗಳಲ್ಲಿ ಸರ್ಕಾರದ ತಾರತಮ್ಯ ಧೋರಣೆ ಹೆಚ್ಚುತ್ತಿದೆ. ಇತ್ತೀಚಿನ ಲೋಕೋ ಎಂಜಿನ್ ಸಿಬ್ಬಂದಿಗಳ ಚಳುವಳಿಯಲ್ಲಿ ಸುಮಾರು ಐದು ನೂರು ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಲಾಗಿದೆ. ಮತ್ತು ಅಷ್ಟೇ ಸಂಖ್ಯೆಯ ಕಾರ್ಮಿಕರನ್ನು ಕಡ್ಡಾಯವಾಗಿ ಸೇವೆಯಿಂದ ನಿವೃತ್ತಿಗೊಳಿಸಲಾಗಿದೆ. ಅಧಿಕ ಸಂಖ್ಯೆಯ ಕಾರ್ಮಿಕರನ್ನು ದಸ್ತಗಿರಿ ಮಾಡುವ ಮೂಲಕ ಭಯದ ವಾತಾವರಣವನ್ನು ಸೃಷ್ಟಿಪಡಿಸಲಾಗಿದೆ. ಮತ್ತು ಅನೇಕ ಕಾರ್ಮಿಕರು ಭೂಗತರಾಗಬೇಕಾದ ಅವಶ್ಯಕತೆಯುಂಟಾಯಿತು. ಕಾರ್ಮಿಕರ ಪತ್ನಿಯರನ್ನು ಸಹ ಬಂಧಿಸಿ ಪೋಲೀಸ್ ಲಾಕ್-ಅಪ್‌ನಲ್ಲಿ ಇಡಲಾಗಿತ್ತು. ಘಜಿಯಾಬಾದ್‌ನ ಭಾರತ ಎಲೆಕ್ಟ್ರಾನಿಕ್ಸ್ ಕಾರ್ಮಿಕರು ತಮ್ಮ ಮುಷ್ಕರವನ್ನು ಪ್ರಾರಂಭಿಸುವ ಮೊದಲೇ ಫೆಬ್ರವರಿ 19 ರಂದು ಪೋಲೀಸರ ಅಮಾನುಷ ಲಾಠೀ ಚಾರ್ಜಿಗೆ ಬಲಿಯಾಗಿ ಬಂಧಿಸಲ್ಪಟ್ಟರು. ಲಕ್ನೋದ 35 ಹೆಚ್.ಎ.ಎಲ್. ಕಾರ್ಮಿಕರು ಲಾಠಿ ಏಟಿನಿಂದ ಗಾಯಗೊಂಡರು.

ಇಂತಹ ಸಂದರ್ಭದಲ್ಲಿ ಕಾರ್ಮಿಕ ಸಂಘಗಳು ಒಂದಾಗಿ ಕಾರ್ಮಿಕ ಚಳುವಳಿಯ ಮೇಲೆ ಮತ್ತು ಕಾರ್ಮಿಕರ ಜೀವನದ ಮೇಲೆ ಅಧಿಕಗೊಳ್ಳುತ್ತಿರುವ ಸರ್ಕಾರದ ಆಕ್ರಮಣದ ವಿರುದ್ಧ ಬಲಿಷ್ಠವಾದ ಹೋರಾಟ ನಡೆಸದಿದ್ದಲ್ಲಿ ಮುಂದಿನ ದಿನಗಳು ಮತ್ತೂ ಕರಾಳವಾಗುತ್ತಿವೆ.

ಆದ್ದರಿಂದ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ರಾಷ್ಟ್ರೀಯ ಒಕ್ಕೂಟಗಳು ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆಯ ವಿರುದ್ಧ ಮತ್ತು ಬೇಡಿಕೆಗಳ ಈಡೇರಿಕೆಗಾಗಿ ತಕ್ಷಣ ಕ್ರಿಯೆಗಿಳಿಯಲು ಕರೆ ನೀಡಿದೆ:

— ಬೆಂಗಳೂರು ಆಧಾರಿತ ಉದ್ಯಮಗಳಲ್ಲಿ ಸಂಘದ ಪ್ರತಿನಿಧಿಗಳೊಡನೆ ಮಾತುಕತೆಯನ್ನು ಪುನರಾರಂಭಿಸಲು,

— ಎಸ್.ಐ.ಸಿ. ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಲು ಮತ್ತು ಜಿ.ಐ.ಸಿ. ಮೇಲಿನ ನೋಟಿಫಿಕೇಶನ್ನು ರದ್ದುಗೊಳಿಸಲು,

— ವಜಾ ಮಾಡಲ್ಪಟ್ಟ ಎಲ್ಲಾ ರೈಲ್ವೇ ಕಾರ್ಮಿಕರನ್ನೂ ಪುನರ್ನೇಮಕಗೊಳಿಸುವುದು ಮತ್ತು ವಿವಿಧ ಕಾರಾಗೃಹಗಳಲ್ಲಿ ಬಂಧಿತರಾಗಿರುವ ಎಲ್ಲಾ ರೈಲ್ವೇ ಕಾರ್ಮಿಕರನ್ನೂ ಬಿಡುಗಡೆಗೊಳಿಸಲು,

— ಸಾಮೂಹಿಕ ಚೌಕಾಶಿಯನ್ನೊಳಗೊಂಡು ಎಲ್ಲಾ ಕಾರ್ಮಿಕ ಹಕ್ಕುಗಳ ರಕ್ಷಣೆಗಾಗಿ ಮತ್ತು,

— ವೇತನ ಕಡಿತವನ್ನು ಕೊನೆಗೊಳಿಸಲು.

ಆದ್ದರಿಂದ ಈ ಸಭೆಯು ಕೆಳಗಿನ ಕಾರ್ಯಕ್ರಮಗಳನ್ನು ಆಚರಿಸಲು ಎಲ್ಲಾ ಕಾರ್ಮಿಕಸಂಘಗಳಿಗೂ ಕರೆ ನೀಡಿದೆ.

1. ಮಾರ್ಚ್ 3, 1981 ರಂದು ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಎಲ್ಲಾ ಸಂಘಗಳೂ ಜಂಟೀ ಪ್ರದರ್ಶನಗಳು, ಸಭೆಗಳು, ಬ್ಯಾಡ್ಜ್ ಧರಿಸುವುದು ಮುಂತಾದವುಗಳನ್ನ ನಡೆಸುವುದು.

2. ಮಾರ್ಚ್ 11, 1981 ರಂದು ಮೇಲಿನ ಬೇಡಿಕೆಗಳ ಬೆಂಬಲವಾಗಿ ಒಂದು ದಿನದ ಅಖಿಲಭಾರತ ಮುಷ್ಕರವನ್ನು ಎಲ್ಲಾ ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿಯೂ ನಡೆಸುವುದು.

ಪರಿಸ್ಥಿತಿಯ ಮರು ದಿನ ವಿಮರ್ಶೆಗಾಗಿ ಮತ್ತು ಕಾರ್ಯಕ್ರಮವನ್ನು ನಿರ್ಧರಿಸುವ ಸಲುವಾಗಿ ಏಪ್ರಿಲ್ ಕೊನೆಯ ವೇಳೆಗೆ ದೆಹಲಿಯಲ್ಲಿ ಎಲ್ಲಾ ಕಾರ್ಮಿಕಸಂಘಗಳ ಅಖಿಲಭಾರತ ಸಮಾವೇಶವನ್ನು ನಡೆಸಲು ಸಭೆ ನಿರ್ಧರಿಸಿತು.

○

ಜಿಲ್ಲಾ ಕೇಂದ್ರಗಳಲ್ಲಿ ಸತ್ಯಾಗ್ರಹ

(1ನೇ ಪುಟದಿಂದ)

ನಾಲ್ಕೂ ಪಕ್ಷಗಳ ಪ್ರತಿನಿಧಿಗಳು, (ಈಗಾಗಲೇ ಜಿಲ್ಲಾ ಮಟ್ಟದ ರೈತ ಕಾರ್ಮಿಕರ ಹೋರಾಟ ಸಮಿತಿಗಳಿದ್ದರೆ ಈ ಸಮಿತಿಗಳು) ಜಿಲ್ಲಾ ಮಟ್ಟದಲ್ಲಿ ತಕ್ಷಣವೇ ಸೇರಿಕೊಂಡು, ಜಿಲ್ಲಾಮಟ್ಟದ ಹೋರಾಟ ಸಮಿತಿಗಳನ್ನು ಸರಿಯಾಗಿ ರೂಪಿಸಿಕೊಂಡು ಮಾರ್ಚ್ 23ರ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಈಗಿಂದಲೇ ಶ್ರಮಿಸಲು ರಾಜ್ಯ ಹೋರಾಟ ಸಮಿತಿಯು ಕರೆ ಇತ್ತಿದೆ. ಜನತಾಪಕ್ಷ ಮತ್ತು ಇತರ ಸಮಾನ ಅಭಿಪ್ರಾಯವುಳ್ಳ ಸಂಘಟನೆಗಳನ್ನು ಸೇರಿಸಿಕೊಂಡು, ವಿಶಾಲ ತಳಹದಿಯ ಐಕ್ಯತೆ ಮತ್ತು ಜನಕೀಯ ಚಳುವಳಿ ಬೆಳೆಸಲು ಪ್ರಯತ್ನಿಸಬೇಕು. ರಾಜ್ಯ ಹೋರಾಟ ಸಮಿತಿಯು ಮುಂದಿಟ್ಟ ಹನ್ನೆರಡು ಪ್ರಮುಖ ಬೇಡಿಕೆಗಳೊಂದಿಗೆ, ಜಿಲ್ಲಾಮಟ್ಟದ ವಿಶಿಷ್ಟ ಬೇಡಿಕೆಗಳನ್ನೂ ಸೇರಿಸಿಕೊಳ್ಳಬಹುದೆಂದೂ ಸೂಚಿಸಲಾಗಿದೆ. ಭಿತ್ತಿಪತ್ರಗಳು, ಕರಪತ್ರಗಳು ಮೊದಲಾದವುಗಳನ್ನು ಜಿಲ್ಲಾ ಸಮಿತಿಗಳೇ ಮಾಡಿಸಿಕೊಳ್ಳತಕ್ಕದ್ದೆಂದೂ. ಮಾರ್ಚ್ 23ರ ಮೊದಲು ತಾಲ್ಲೂಕು ಕೇಂದ್ರ ಮತ್ತಿತರ ಕಡೆಗಳಲ್ಲಿ ಪ್ರಚಾರದ ಕೆಲಸ, ಬಹಿರಂಗ ಸಭೆಗಳನ್ನೂ ನಡೆಸಬೇಕೆಂದು ಸೂಚಿಸಲಾಗಿದೆ. ರೈತರ ಜಾಥಾವು ಯಶಸ್ವಿಯಾದ ಹಿನ್ನೆಲೆ ಮತ್ತು ಇಂದಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, 23ರ ಕಾರ್ಯಕ್ರಮವನ್ನು ಬೃಹತ್ ಪ್ರಮಾಣದಲ್ಲಿ ನಡೆಸುವುದು, ಜನತೆಗೆ ತಿಳುವಳಿಕೆ ನೀಡಿ ಹೋರಾಟದ ಮೂಲಕ ಸರ್ಕಾರದ ಮೇಲೆ ಒತ್ತಾಯ ಹೇರುವುದು ಅವಶ್ಯ.

ರೈತರ ಬೆಳೆಗೆ ಸರಿಯಾದ ಬೆಲೆ ಸಿಗುವ ವ್ಯವಸ್ಥೆ ಮತ್ತು ವೈಜ್ಞಾನಿಕ ರೀತಿಯಲ್ಲಿ ಸಹಕಾರಿ ಸಾಲದ ವ್ಯವಸ್ಥೆಯನ್ನು ಮಾಡುವತನಕ ಹಾಗೂ ಈ ದಿಸೆಯಲ್ಲಿ ಸರ್ಕಾರವು ಮಾತುಕತೆ ನಡೆಸಿ ಒಂದು ಒಪ್ಪಂದಕ್ಕೆ ಬರುವ ತನಕ ಸಾಲದ ವಸೂಲಾತಿಯನ್ನು ವಿರೋಧಿಸಲೂ ರೈತ ಕಾರ್ಮಿಕ ಹೋರಾಟ ಸಮಿತಿಯು ಕರೆ ಇತ್ತಿದೆ. ಬರಗಾಲ ಪೀಡಿತ ಪ್ರದೇಶದಲ್ಲಿ ಸಾಲ, ತೆರಿಗೆಗಳ ವಸೂಲಾತಿಯನ್ನು ಕೂಡಲೇ ಕೈಬಿಡುವಂತೆಯೂ ಸಮಿತಿಯು ಸರ್ಕಾರವನ್ನು ಒತ್ತಾಯಿಸಿದೆ. ಸಾಲಗಾರರ ಸಮ್ಮೇಳನಗಳನ್ನು ಸೇರಿಸಿ, ಸಾಲ ವಸೂಲಿ ವಿರುದ್ಧ ಪ್ರತಿಭಟಿಸಲೂ ಕರೆ ಈಯಲಾಗಿದೆ.

●

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರಿಗೆ ಬೆಂಬಲ

ಎಚ್. ಎಂ. ಎಸ್. ಉಪಾಧ್ಯಕ್ಷ ಶ್ರೀ ಡಿ. ಡಿ. ವಶಿಷ್ಠ, ಎ. ಐ. ಟಿ. ಯು ಸಿ. ಕಾರ್ಯದರ್ಶಿ ಶ್ರೀವಾತ್ಸವ, ಬಿ.ಎಂ.ಎಸ್. ಕಾರ್ಯದರ್ಶಿ ಓಂ ಪ್ರಕಾಶ್ ಅಘಿ ಮತ್ತು ಸಿ. ಐ. ಟಿ. ಯು. ಕಾರ್ಯದರ್ಶಿ ನೃಸಿಂಗ್ ಚಕ್ರವರ್ತಿ, ಬೆಂಗಳೂರು-ಹೈದರಾಬಾದ್ ಮತ್ತಿತರ ಕಡೆ ನಡೆಯುತ್ತಿರುವ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ದೀರ್ಘಕಾಲದ ಮುಷ್ಕರವನ್ನು ಬೆಂಬಲಿಸಿ ಜಂಟೀ ಪತ್ರಿಕಾ ಹೇಳಿಕೆಯನ್ನು ನೀಡಿದ್ದಾರೆ.

ಬೆಂಗಳೂರಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಆಡಳಿತ ಮಂಡಳಿಗಳು ಕಾರ್ಮಿಕರೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ಪ್ರಕಾರ ಬಿ.ಎಚ್.ಇ. ಎಲ್. ಕಾರ್ಮಿಕರಿಗೆ ಹೆಚ್ಚಾದ ಸಂಬಳವನ್ನು ಕೊಡದೇ, ಕಾರ್ಮಿಕರನ್ನು ಒತ್ತಾಯದಿಂದ ಮುಷ್ಕರದ ಹಾದಿಗೆ ದೂಡಿದ್ದಾರೆ. 1980ರ ಜನವರಿಯಲ್ಲಿ ಬಿ. ಎಚ್. ಇ. ಎಲ್. ಕಾರ್ಮಿಕರ ವೇತನವು ಪೂರ್ವಾನ್ವಯವಾಗಿ 1-9-1978ರಿಂದ ಹೆಚ್ಚಾಯಿತು.

ಸರ್ಕಾರವು ಈ ಒಪ್ಪಂದವನ್ನು ಮಾನ್ಯಮಾಡದೇ ತೀವ್ರವಾದ ದಬ್ಬಾಳಿಕೆಯನ್ನು ನಡೆಸುತ್ತಿದೆ.

ನಾವು, ಜನವರಿ 20ರಂದು ಮೂವರ ಪ್ರಾಣವನ್ನು ಆಹುತಿ ತೆಗೆದುಕೊಂಡ ಪೈಶಾಚಿಕ ಪೋಲೀಸ್ ಗೋಲಿಬಾರನ್ನು ಉಗ್ರವಾಗಿ ಖಂಡಿಸುತ್ತೇವೆ.

ಈ ದಬ್ಬಾಳಿಕೆಯನ್ನು ಮತ್ತು ಹಿಂದಿನ ಒಪ್ಪಂದಗಳನ್ನು ಮಾನ್ಯಮಾಡಲು ನಿರಾಕರಿಸುವವನ್ನು ಕಾರ್ಮಿಕ ವರ್ಗ ಮತ್ತು ಟ್ರೇಡ್‌ಯೂನಿಯನ್ ಚಳುವಳಿ ದೇಶಾದ್ಯಂತ ಮೂಕ ಪ್ರೇಕ್ಷಕನಂತೆ ನೋಡಿಕೊಂಡಿರಲು ಸಾಧ್ಯವಿಲ್ಲ. ಹಾಗೆ ಆದದ್ದೇ ಆದರೆ ಸಾಮೂಹಿಕ-ಚೌಕಾಶಿಯನ್ನೇ ಹೇಳ ಹೆಸರಿಲ್ಲದಂತೆ ಮಾಡಿದಂತಾಗುವುದು ಮತ್ತು ಸಂಧಾನದಿಂದ ಮಾಡಿಕೊಂಡ ಒಪ್ಪಂದಗಳಿಗೆ ಬೆಲೆಯೇ ಇಲ್ಲದಂತಾಗುತ್ತದೆ.

ಆದ್ದರಿಂದ ನಾವು ದೇಶದಲ್ಲಿರುವ ಎಲ್ಲ ಕಾರ್ಮಿಕಸಂಘಗಳಿಗೂ ಯಾವುದೇ ಬೇಧಭಾವವಿಲ್ಲದೇ ಪ್ರಧಾನ ಮಂತ್ರಿಗೆ ಪ್ರತಿಭಟನಾ ಟೆಲಿಗ್ರಾಂಗಳನ್ನು ಕಳುಹಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ ಮತ್ತು ಹಿಂದೆ ಆಗಿರುವ ಒಪ್ಪಂದದ ಪ್ರಕಾರ ನಡೆದುಕೊಳ್ಳಬೇಕೆಂದು ಸರ್ಕಾರವನ್ನು ಆಡಳಿತವರ್ಗವನ್ನು ಒತ್ತಾಯಿಸುತ್ತೇವೆ.

○

Statement about ownership and other particulars about Newspaper AIKYARANGA, to be published in the first issue every year after the last day of February.

FROM IV

1.	Title of Newspaper	AIKYARANGA
2.	Registration Number of the Newspaper	MAG (2) PRB DECR 319/78-79
3.	Language/Languages in which it is published	Kannada
4.	Periodicity of its publication & the day/days/dates on which it is published	Weekly
5.	Retail price of the Newspaper	50 paise
6.	Publisher's Name Nationality Address of the owners	P. Ramachandra Rao Indian L-56, K. V. Temple Street, Sultanpet BANGALORE-560 053
7.	Printer's Name Nationality Address	P. Ramachandra Rao Indian L-56, K. V Temple Street, Sultanpet BANGALORE-560 053
8.	Editor's Name Nationality	M. K. Bhat L-56, K. V. Temple Street, Sultanpet BANGALORE-560 053
9.	True and precise account of the precise where the Printing is conducted	Nutan Printing, Publishing & Training Centre 405, Sampige Road Malleswaram BANGALORE-560 003
10.	Owner's Names	Karnataka State Committee, Communist Party of India (Marxist) L-56, K. V. Temple Street, Sulthanpet BANGALORE-560 053
11.	Place of Publication	BANGALORE-560 053

I, P. RAMACHANDRA RAO hereby declare that the particulars given above are true to the best of my knowledge and belief.

Bangalore
1-3-81

P. RAMACHANDRA RAO
Signature of Publisher

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR M. K. BHAT